ಜನಮನದ ದನಿ
# ಪ್ರಜೋದಯ
ಸಂಪಾದಕ : ಜೆ.ಆರ್. ಕೆಂಚೇಗೌಡ




ಗಾಲೆಯಲ್ಲಿ ಶ್ರೀಲಂಕಾ ವಿರುದ್ಧ ನಡೆಯುತ್ತಿರುವ ಮೊದಲ ಟೆಸ್ಟ್ ಪಂದ್ಯದ 2ನೇ ಇನ್ನಿಂಗ್ಸ್‌ನಲ್ಲಿ ಅರ್ಧ ಶತಕ ಗಳಿಸಿದ ಭಾರತದ ರಿಷಭ್ ಪಂತ್

19 ಆಗಸ್ಟ್, 2026 ಬುಧವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -157 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಜೆನ್ ಝೀಯನ್ನು ಸಂಭಾಳಿಸುವುದು ಹೇಗೆ? » 2



ನಿಗದಿತ ಬೆಲೆಗಿಂತ ಅಧಿಕ ಹಣಕ್ಕೆ ರಸಗೊಬ್ಬರ ಮಾರಾಟ » 3



ನಮ್ಮ ಆಡಳಿತದಲ್ಲಿ ನಿಮ್ಮ ಹಸ್ತಕ್ಷೇಪ ಸರಿಯಲ್ಲ » 4

# ರಾಜೀನಾಮೆ ಜಟಾಪಟಿ: ಕಲಾಪ ಬಲಿ

## ಉಭಯ ಸದನಗಳಲ್ಲಿ ಕಾಂಗ್ರೆಸ್-ಬಿಜೆಪಿ ವಾಕ್ಸಮರ | ಕಪ್ಪು ಶಾಲು, ಚಾರ್ಜ್‌ಶೀಟ್ ಹಿಡಿದು ಆಕ್ರೋಶ

• ಪ್ರಜೋದಯ ವರದಿ

**ಬೆಂಗಳೂರು:** ವಾಲ್ಮೀಕಿ ನಿಗಮದ ಹಗರಣದ ಆರೋಪಿ ಬಿ.ನಾಗೇಂದ್ರ ಅವರ ರಾಜೀನಾಮೆಗೆ ವಿಪಕ್ಷ ಬಿಜೆಪಿ ಪಟ್ಟು ಹಿಡಿದ ಪರಿಣಾಮ ಉಭಯ ಸದನಗಳ ನಾಲ್ಕನೇ ದಿನದ ಕಲಾಪದಲ್ಲಿ ಭಾರೀ ವಾಕ್ಸಮರವೇ ನಡೆಯಿತು. ಬಿಜೆಪಿ ಶಾಸಕರು ವಿಧಾನಸಭೆಯಲ್ಲಿ ಕಪ್ಪು ಶಾಲು ಹಾಗು ಸಿಬಿಐನ ಚಾರ್ಜ್‌ಶೀಟ್ ಪ್ರತಿ ಪ್ರದರ್ಶಿಸಿ ಕಿಡಿಕಾರಿದರು.

ಪ್ರತ್ಯುತ್ತರವಾಗಿ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು, ರಾಮಮಂದಿರ ದುಡ್ಡು ಎಲ್ಲಿ ಹೋಯಿತು ಅದರ ಬಗ್ಗೆಯೂ ಚರ್ಚೆ ಮಾಡೋಣ ಎಂದು ಆಗ್ರಹಿಸಿದರು. ಪ್ರಿಯಾಂಕ್ ಅವರಿಗೆ, ಸಚಿವ ಯತೀಂದ್ರ ಸಿದ್ದರಾಮಯ್ಯ ಸಾಥ್ ನೀಡಿದರು. ಈ ವೇಳೆ ಮುಡಾ ಮುಡಾ ಎಂದು ಬಿಜೆಪಿ ಶಾಸಕರು ಘೋಷಣೆ ಕೂಗಿದ ಪ್ರಸಂಗವೂ ನಡೆಯಿತು.

ನಿಮ್ಮ ಯೋಗ್ಯತೆ ಗೊತ್ತಿಲ್ವಾ ಎಂದು ಸಚಿವ ಕೆ.ಎಂ.ಶಿವಲಿಂಗೇಗೌಡ ವಿಪಕ್ಷಗಳ ವಿರುದ್ಧ ಹರಿಹಾಯ್ದ ಪರಿಣಾಮ ವಿಧಾನ ಸಭೆ ಮತ್ತಷ್ಟು ಗದ್ದಲದ ಗೂಡಾಗಿ ಮಾರ್ಪಟ್ಟಿತು. ಬಿಜೆಪಿ ಶಾಸಕರು ಮತ್ತು ಸಚಿವ ಹೆಚ್.ಸಿ.ಬಾಲಕೃಷ್ಣ ನಡುವೆ ತೀವ್ರ ವಾಕ್ಸಮರ ನಡೆದು, ಬಾಲಕೃಷ್ಣ ಅವರಿಗೆ ಸಚಿವ ಕೃಷ್ಣ ಬೈರೇಗೌಡ ಅವರು ಕೂಡ ಸಾಥ್ ನೀಡಿದರು.

ನಾಗೇಂದ್ರ ವಿಷಯದ ಬಗ್ಗೆ ನಮ್ಮ ನಿಲುವನ್ನು ನಿಮಗೆ ತಿಳಿಸಿದ್ದೇವೆ. ಚೆಂಡು ಈಗ ಕಾಂಗ್ರೆಸ್ ಅಂಗಳದಲ್ಲಿದೆ. ಸರ್ಕಾರ ನಿರ್ಧರಿಸಿದರೆ » **ನಾಲ್ಕನೇ ಪುಟದಲ್ಲಿ**



### ಪರಿಷತ್‌ನಲ್ಲೂ ಆರೋಪ-ಪ್ರತ್ಯಾರೋಪ

ನಾಗೇಂದ್ರ ರಾಜೀನಾಮೆಗೆ ಪರಿಷತ್‌ನಲ್ಲಿ ವಿಪಕ್ಷ ಸದಸ್ಯರ ಪಟ್ಟು ಹಿಡಿದ ಪರಿಣಾಮ ಕಾಂಗ್ರೆಸ್, ಬಿಜೆಪಿ ಸದಸ್ಯರಿಂದ ಪರ ವಿರೋಧ ಘೋಷಣೆಗಳು ಮೊಳಗಿದವು. ವಾಲ್ಮೀಕಿ ನಿಗಮದ ಹಣ ಎಲ್ಲಿ ಹೋಯ್ತು, ರಾಹುಲ್ ಜೇಬಿಗೆ ಹೋಯ್ತು ಎಂದು ಬಿಜೆಪಿ ನಾಯಕರು ಕೂಗಿದರು. ಬಿಜೆಪಿ ನಾಯಕರ ಘೋಷಣೆಗೆ ಕಾಂಗ್ರೆಸ್ ಸದಸ್ಯರಿಂದಲೂ ಕೌಂಟರ್ ವ್ಯಕ್ತ ವಾಗಿದ್ದು, ರಾಮನ ಹುಂಡಿ ಹಣ ಎಲ್ಲಿ ಹೋಯ್ತು ಅಮಿತ್ ಶಾ ಜೇಬಿಗೆ ಹೋಯ್ತು ಎಂದು ಕೈ ಸದಸ್ಯರು ಪ್ರತ್ಯಾರೋಪ ಮಾಡಿದರು.

### ಬಿಜೆಪಿಗೆ ಮುಜುಗರ ತಂದಿಟ್ಟ ಜೆಡಿಎಸ್ ನಡೆ

ಸಚಿವ ನಾಗೇಂದ್ರ ವಜಾಕ್ಕೆ ಆಗ್ರಹಿಸಿ ಧರಣಿಗೆ ನಿರ್ಧರಿಸಿದ್ದರೂ ಬರಗಾಲದ ಚರ್ಚೆಗೆ ನಿಲುವಳಿ ನೋಟೀಸ್ ನೀಡಿದ್ದ ಜೆಡಿಎಸ್ ನಡೆ ವಿಪಕ್ಷ ಬಿಜೆಪಿಗೆ ಮುಜುಗರ ತಂದಿಟ್ಟ ಪ್ರಸಂಗವೂ ನಡೆಯಿತು. ಬಿಜೆಪಿ ನಾಗೇಂದ್ರ ರಾಜೀನಾಮೆಗೆ ಒತ್ತಾಯ ಆರಂಭಿಸಿದ ಕೂಡಲೇ, ಜೆಡಿಎಸ್ ನಿಲುವಳಿ ಮೇಲೆ ಚರ್ಚೆಗೆ ಸ್ಪೀಕರ್ ಅವಕಾಶ ಕೊಟ್ಟರು. ಹೀಗಾಗಿ ಬರ ಪರಿಸ್ಥಿತಿ ಬಗ್ಗೆ ನಿಲುವಳಿ ವಾಪಾಸ್ ಪಡೆಯುವಂತೆ ವಿಧಾನಸಭೆಯಲ್ಲಿ ಜೆಡಿಎಲ್‌ಪಿ ನಾಯಕ ಸುರೇಶ್ ಬಾಬುಗೆ ಬಿಜೆಪಿಯ ಸುನೀಲ್ ಕುಮಾರ್, ಅಶ್ವತ್ಥ್ ನಾರಾಯಣ ಮನವಿ ಮಾಡಿದರು. ನಿಲುವಳಿ ಹಿಂಪಡೆದಿರುವುದಾಗಿ ಸುರೇಶ್ ಬಾಬು ಹೇಳಿದರಾದರೂ, ನೀವು ನೋಟೀಸ್ ಕೊಟ್ಟಿದ್ದೀರಿ. ಹೀಗಾಗಿ ಚರ್ಚೆಗೆ ಅವಕಾಶ ಕೊಟ್ಟಿದ್ದೇನೆಂದು ಸ್ಪೀಕರ್ ತಿಳಿಸಿದರು.

# ಬೆಟ್ಟದ ಭೈರವೇಶ್ವರ ದೇವಾಲಯದಲ್ಲಿ ಮತ್ತೆ ಪ್ರವಾಸಿಗರ ಗಲಾಟೆ

• ಪ್ರಜೋದಯ ವರದಿ

**ಸಕಲೇಶಪುರ:** ತಾಲ್ಲೂಕಿನ ಬೆಟ್ಟದ ಭೈರವೇಶ್ವರ ದೇವಸ್ಥಾನದಲ್ಲಿ ಪ್ರವಾಸಿಗರು ಹಾಗು ಭದ್ರತಾ ಸಿಬ್ಬಂದಿ ನಡುವೆ ಗಲಾಟೆ ಪ್ರಕರಣ ಮುಂದುವರಿದಿದ್ದು, ದೇಗುಲದ ಗೇಟ್ ತೆರೆಯುವ ವಿಚಾರಕ್ಕೆ ಭಾರೀ ಹೈಡ್ರಾಮಾ ನಡೆದಿದೆ.

ಬೆಂಗಳೂರಿನಿಂದ ಬಂದಿದ್ದ 60ಕ್ಕೂ ಅಧಿಕ ಪ್ರವಾಸಿಗರು ಕುಡಿದ ಮತ್ತಿನಲ್ಲಿ ಗಲಾಟೆ ಮಾಡಿದ್ದಾರೆಂದು ತಿಳಿದು ಬಂದಿದೆ. ಸೋಮವಾರ ಬೆಳಿಗ್ಗೆ 11ರ ಸುಮಾರಿಗೆ ದೇವಸ್ಥಾನದ ಪ್ರವೇಶ ದ್ವಾರ ತೆರೆಯುವಂತೆ ಭದ್ರತಾ ಸಿಬ್ಬಂದಿಯೊಂದಿಗೆ ಪ್ರವಾಸಿಗರು ವಾಗ್ವಾದ ನಡೆಸಿದ್ದಾರೆ.

ಪರಿಸ್ಥಿತಿ ನಿಯಂತ್ರಿಸಲು ಮುಂದಾದ ಪೊಲೀಸ್ ಹಾಗು ಅರಣ್ಯ ಇಲಾಖೆ ಸಿಬ್ಬಂದಿಯೊಂದಿಗೂ ಪ್ರವಾಸಿಗರು ಗಲಾಟೆ ನಡೆಸಿದರು. ಪೊಲೀಸರು ಮಧ್ಯಪ್ರವೇಶಿಸಿ ಪ್ರವಾಸಿಗರನ್ನು ಸ್ಥಳದಿಂದ ಹೊರಗೆ ಕಳುಹಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ದೇವಸ್ಥಾನದ ಪಾವಿತ್ರ್ಯ ಹಾಗು ಪ್ರವಾಸಿಗರ ವರ್ತನೆಗೆ ಸಂಬಂಧಿಸಿ ಈ ಹಿಂದೆಯೂ ಸ್ಥಳೀಯರು ಹಾಗು ಪ್ರವಾಸಿಗರ ನಡುವೆ ಹಲವು ಬಾರಿ ವಿವಾದಗಳು ಉಂಟಾಗಿ ಪೊಲೀಸ್ ಠಾಣೆಯ ಮೆಟ್ಟಿಲೇರುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಇದೀಗ ಮತ್ತೆ ಇಂತಹ ಘಟನೆ ನಡೆದಿರುವುದರಿಂದ ದೇವಸ್ಥಾನದ ಭದ್ರತೆ ಕುರಿತು ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದ್ದಾರೆ.

ದೇವಸ್ಥಾನದ ಪಾವಿತ್ರ್ಯ, ಶಾಂತಿ ಹಾಗು ಭದ್ರತೆ ದೃಷ್ಟಿಯಿಂದ ಹೆಚ್ಚಿನ ಪೊಲೀಸ್ ಹಾಗು ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಬೇಕು. ಮದ್ಯಪಾನ ಮಾಡಿ ದೇವಸ್ಥಾನಕ್ಕೆ » **ನಾಲ್ಕನೇ ಪುಟದಲ್ಲಿ**



## ನಾಳೆ ಡಿ.ದೇವರಾಜು ಅರಸು ಜನ್ಮ ದಿನಾಚರಣೆ

• ಪ್ರಜೋದಯ ವರದಿ

**ಹಾಸನ:** ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಆ.20 ರಂದು ಬೆಳಿಗ್ಗೆ 11 ಗಂಟೆಗೆ ಮಾಜಿ ಮುಖ್ಯಮಂತ್ರಿ ಡಿ.ದೇವರಾಜು ಅರಸುರವರ 111 ನೇ ಜನ್ಮ ದಿನಾಚರಣೆ ಆಯೋಜಿಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಕಾರ್ಯಕ್ರಮ ಉದ್ಘಾಟಿಸುವರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ಎಸ್.ತಂಗಡಗಿ, ಶಾಸಕ ಹೆಚ್.ಪಿ.ಸ್ವರೂಪ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಂಸದ ಶ್ರೇಯಸ್,ಮಾಜಿ ಸಚಿವ ಹೆಚ್.ಡಿ ರೇವಣ್ಣ, ಜಿಲ್ಲೆಯ ಎಲ್ಲಾ ಶಾಸಕರು, ಮುಂತಾದವರು ಭಾಗವಹಿಸಲಿದ್ದಾರೆ.

ಅಂದು ಬೆಳಿಗ್ಗೆ 9-30 ಗಂಟೆಗೆ ಜಿಲ್ಲಾಧಿಕಾರಿ ಕಚೇರಿಯಿಂದ ಅರಸುರವರ ಭಾವಚಿತ್ರಕ್ಕೆ ಪುಷ್ಪಾರ್ಚನೆಯೊಂದಿಗೆ ಬೆಳ್ಳಿ ರಥದಲ್ಲಿ ಮೆರವಣಿಗೆ ಚಾಲನೆ ನಂತರ ಎನ್.ಆರ್.ವೃತ್ತ ಮಾರ್ಗವಾಗಿ ಮಹಾವೀರ ವೃತ್ತ ಹಾಸನಾಂಬ ಕಲಾಕ್ಷೇತ್ರದವರೆಗೆ ವಿವಿಧ ಕಲಾ ತಂಡಗಳೊಂದಿಗೆ ಮೆರವಣಿಗೆ ನಡೆಯಲಿದೆ.

# ಪಾಲಿಕೆ ಕಚೇರಿ ಮೇಲೆ ಲೋಕಾಯುಕ್ತ ದಿಢೀರ್ ದಾಳಿ

• ಪ್ರಜೋದಯ ವರದಿ

**ಹಾಸನ:** ಸಾರ್ವಜನಿಕರಿಂದ ನಿರಂತರವಾಗಿ ಕೇಳಿ ಬರುತ್ತಿದ್ದ ದೂರುಗಳ ಹಿನ್ನಲೆಯಲ್ಲಿ ಮಹಾನಗರ ಪಾಲಿಕೆ ಕಚೇರಿಗೆ ಲೋಕಾಯುಕ್ತ ಅಧಿಕಾರಿಗಳ ಐದು ತಂಡ ಮಂಗಳವಾರ ದಿಢೀರ್ ಭೇಟಿ ನೀಡಿ ಸಂಜೆವರೆಗೂ ಸಮಗ್ರ ಪರಿಶೀಲನೆ ನಡೆಸಿತು.

ಲೋಕಾಯುಕ್ತ ಎಸ್‌ಪಿ ನಂದಿನಿ ಅವರ ನೇತೃತ್ವದಲ್ಲಿ ಡಿವೈಎಸ್ಪಿ, ಇನ್‌ಸ್ಪೆಕ್ಟರ್‌ಗಳು ಸೇರಿ ಹಾಸನ, ಕೊಡಗು ಹಾಗು ಚಾಮರಾಜನಗರ ಜಿಲ್ಲೆಗಳಿಂದ 30ಕ್ಕೂ ಹೆಚ್ಚು ಅಧಿಕಾರಿಗಳು ಮತ್ತು ಸಿಬ್ಬಂದಿ ಪರಿಶೀಲನೆಯಲ್ಲಿ ಭಾಗವಹಿಸಿದ್ದರು. ಸುಮಾರು ಆರು ವಾಹನಗಳಲ್ಲಿ ಅಧಿಕಾರಿಗಳು ಹಾಗು ಸಿಬ್ಬಂದಿ ಪಾಲಿಕೆ ಕಚೇರಿಗೆ ಆಗಮಿಸಿ, ಏಕಕಾಲದಲ್ಲಿ ವಿವಿಧ ವಿಭಾಗಗಳಲ್ಲಿ ದಾಖಲೆಗಳ ಪರಿಶೀಲನೆ ನಡೆಸಿದರು.

ಲೋಕಾಯುಕ್ತ ಅಧಿಕಾರಿಗಳು ಪಾಲಿಕೆ ಆಯುಕ್ತರ ಕಚೇರಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್, ಸಹಾಯಕ ಇಂಜಿನೀಯರ್ ಸೇರಿ ವಿವಿಧ ವಿಭಾಗಗಳಿಗೆ ತೆರಳಿ ಕಡತಗಳು, ದಾಖಲೆಗಳು ಹಾಗು ಅಧಿಕಾರಿಗಳು ಮತ್ತು ಸಿಬ್ಬಂದಿಯ ಕಾರ್ಯನಿರ್ವಹಣೆಗೆ ಸಂಬಂಧಿಸಿದ ಮಾಹಿತಿಯನ್ನು ಪರಿಶೀಲಿಸಿದರು. ಕೆಲ ಕಚೇರಿಗಳ ಬಾಗಿಲುಗಳನ್ನು ಮುಚ್ಚಿಕೊಂಡು ದಾಖಲೆಗಳನ್ನು ಪರಿಶೀಲಿಸುತ್ತಿರುವುದು ಕಂಡುಬಂತು.

ಸಿಬ್ಬಂದಿಯ ಹಾಜರಾತಿ, ಕರ್ತವ್ಯ ನಿರ್ವಹಣೆ, ಸಾರ್ವಜನಿಕರಿಗೆ ಒದಗಿಸಬೇಕಾದ ಸೇವೆಗಳು ಹಾಗು ಅರ್ಜಿಗಳ ವಿಲೇವಾರಿ ಕುರಿತು ಅಧಿಕಾರಿಗಳು ಮಾಹಿತಿ ಸಂಗ್ರಹಿಸಿದರು. ಸಾರ್ವಜನಿಕರಿಂದ ಬಂದಿರುವ ದೂರುಗಳ ಹಿನ್ನಲೆ ಯಾವ ಹಂತದಲ್ಲಿ ವಿಳಂಬವಾಗುತ್ತಿದೆ, ಅರ್ಜಿಗಳ ವಿಲೇವಾರಿ ಹೇಗೆ ನಡೆಯುತ್ತಿದೆ ಹಾಗು ಸಾರ್ವಜನಿಕ ಸೇವೆ ಪಡೆಯುವ ಸಂದರ್ಭದಲ್ಲಿ ಮಧ್ಯವರ್ತಿಗಳ ಹಸ್ತಕ್ಷೇಪವಿದೆಯೇ ಎಂಬ ಬಗ್ಗೆಯೂ ಮಾಹಿತಿ ಪಡೆದುಕೊಂಡರು.

ಪಾಲಿಕೆ ಆಯುಕ್ತರು, ಸಹಾಯಕ ಕಾರ್ಯ ನಿರ್ವಾಹಕ ಇಂಜಿನೀಯರ್ ಸೇರಿ ವಿವಿಧ ಅಧಿಕಾರಿಗಳಿಂದ ಲೋಕಾಯುಕ್ತ ತಂಡ ಹಲವು ಮಾಹಿತಿಗಳನ್ನು ಪಡೆದುಕೊಂಡಿತು. ಸಾರ್ವಜನಿಕರಿಂದ ಬಂದ ದೂರುಗಳಿಗೆ ಸಂಬಂಧಿಸಿದ ಕಡತಗಳು ಮತ್ತು ದಾಖಲೆಗಳನ್ನು ಪರಿಶೀಲಿಸಿ, ಅಗತ್ಯ ಮಾಹಿತಿಯನ್ನು ಅಧಿಕಾರಿಗಳಿಂದ ಪಡೆದುಕೊಳ್ಳಲಾಯಿತು.

ಪಾಲಿಕೆಯ ವಿವಿಧ ವಿಭಾಗಗಳಲ್ಲಿ ನಡೆಯುತ್ತಿರುವ ಕಾಮಗಾರಿಗಳು, ಸಾರ್ವಜನಿಕ ಸೇವೆಗಳ ವಿಲೇವಾರಿ, ಅಧಿಕಾರಿಗಳ ಹಾಜರಾತಿ ಹಾಗೂ ಕರ್ತವ್ಯ ನಿರ್ವಹಣೆ ಸೇರಿ ಹಲವು ಅಂಶಗಳ ಕುರಿತು ಪರಿಶೀಲನೆ ನಡೆಸಲಾಗಿದೆ ಎಂದು ತಿಳಿದುಬಂದಿದೆ.

» **ನಾಲ್ಕನೇ ಪುಟದಲ್ಲಿ**

**ಮೂರು ಜಿಲ್ಲೆಗಳ 30ಕ್ಕೂ ಹೆಚ್ಚು ಅಧಿಕಾರಿಗಳು-ಸಿಬ್ಬಂದಿ ಭಾಗಿ: ವಿವಿಧ ಕಡತಗಳ ಪರಿಶೀಲನೆ**



### ಸಮಸ್ಯೆ ಹೇಳಿಕೊಂಡ ಸಾರ್ವಜನಿಕರು

ಈ ವೇಳೆ ಮಹಾನಗರಪಾಲಿಕೆ ಕಚೇರಿಗೆ ಆಗಮಿಸಿದ್ದ ಸಾರ್ವಜನಿಕರು ಲೋಕಾಯುಕ್ತ ಎಸ್‌ಪಿ ನಂದಿನಿ ಅವರನ್ನು ಭೇಟಿಯಾಗಿ ತಮ್ಮ ಸಮಸ್ಯೆಗಳನ್ನು ತೋಡಿಕೊಂಡರು. ಜನನ-ಮರಣ ಪ್ರಮಾಣಪತ್ರ ವಿತರಿಸುವಲ್ಲಿ ವಿಳಂಬವಾಗುತ್ತಿದೆ ಹಾಗು ಕಚೇರಿಗಳಲ್ಲಿ ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿದೆ ಎಂದು ಸಾರ್ವಜನಿಕರು ದೂರು ನೀಡಿದರು.
ದಾಳಿ ಹಿನ್ನಲೆ ವಿವಿಧ ಕೆಲಸಗಳಿಗಾಗಿ ಆಗಮಿಸಿದ್ದ ಸಾರ್ವಜನಿಕರು ಗಂಟೆಗಟ್ಟ ಕಾದರೂ ಕೆಲಸವಾಗದಿದ್ದರಿಂದ ಅಸಮಾಧಾನ ಹೊರ ಹಾಕಿದರು.

### ಮುಂದಿನ ಕ್ರಮದ ಬಗ್ಗೆ ಕುತೂಹಲ

ಲೋಕಾಯುಕ್ತ ಅಧಿಕಾರಿಗಳ ಭೇಟಿ ಕೇವಲ ಸಾಮಾನ್ಯ ಪರಿಶೀಲನೆಯೇ ಅಥವಾ ನಿರ್ದಿಷ್ಟ ದೂರುಗಳ ಆಧಾರದ ಮೇಲೆ ಕೈಗೊಂಡ ಕ್ರಮವೇ ಎಂಬುದು ಇನ್ನಷ್ಟೇ ಸ್ಪಷ್ಟವಾಗಬೇಕಿದೆ. ಪರಿಶೀಲ ನೆಯ ಬಳಿಕ ಅಧಿಕಾರಿಗಳು ಯಾವ ರೀತಿಯ ವರದಿ ಸಿದ್ಧಪಡಿಸಲಿದ್ದಾರೆ ಹಾಗು ಮುಂದಿನ ಕ್ರಮ ಏನೆಂಬುದು ಕುತೂಹಲಕ್ಕೆ ಕಾರಣವಾಗಿದೆ.

## ಸೂರಜ್ ಮೇಲಿನ ಪ್ರಕರಣ: ಮಾಫಿ ಸಾಕ್ಷಿ ಅರ್ಜಿ ವಜಾ

• ಪ್ರಜೋದಯ ವರದಿ

**ಬೆಂಗಳೂರು:** ವಿಧಾನಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ ಅವರ ವಿರುದ್ಧದ ಅಸಹಜ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಎರಡನೇ ಆರೋಪಿ ಶಿವಕುಮಾರ್ ಸಲ್ಲಿಸಿದ್ದ ಮಾಫಿ ಸಾಕ್ಷಿ ಅರ್ಜಿಯನ್ನು ಬೆಂಗಳೂರಿನ 42ನೇ ಎಸಿಜೆಎಂ ಕೋರ್ಟ್ ವಜಾಗೊಳಿಸಿದೆ.

ಮಾಫಿ ಸಾಕ್ಷಿಯಾಗಲು ಅನುಮತಿ ಕೋರಿ ಎ2 ಶಿವಕುಮಾರ್ ಸಲ್ಲಿಸಿದ್ದ ಮನವಿಯನ್ನು ವಿರೋಧಿಸಿದ್ದ ಸೂರಜ್ ರೇವಣ್ಣ ಪರ ವಕೀಲ ಗಂಗಾಧರ ಶೆಟ್ಟಿ ಅವರ ವಾದವನ್ನು ಪುರಸ್ಕರಿಸಿದ ನ್ಯಾಯಾಲಯವು ಈ ಆದೇಶ ನೀಡಿದೆ.

ಎ2 ಆರೋಪಿ ಶಿವಕುಮಾರ್ ಕೇವಲ ಸಂತ್ರಸ್ತನಿಗೆ ಬೆದರಿಕೆ ಹಾಕಿದ ಆರೋಪದ ಅಡಿಯಲ್ಲಷ್ಟೇ ಭಾಗಿಯಾಗಿದ್ದಾನೆ. ಐಪಿಸಿ ಸೆಕ್ಷನ್ 377 ರ ಅಡಿಯ ಅಸಹಜ ಲೈಂಗಿಕ ದೌರ್ಜನ್ಯ ನಡೆದಿದೆ ಎನ್ನಲಾದ ಘಟನೆಯ ಸಾಕ್ಷಿ ಈತನಲ್ಲ. ಆದ್ದರಿಂದ ಈತ ಪ್ರಕರಣದ ಕುರಿತು ಪ್ರತ್ಯಕ್ಷ ಅಥವಾ ಮಾಫಿ ಸಾಕ್ಷ್ಯ ನೀಡಲು ಸಾಧ್ಯವಿಲ್ಲವೆಂದು ಸೂರಜ್ ರೇವಣ್ಣ ಪರ ವಕೀಲ ಗಂಗಾಧರ ಶೆಟ್ಟಿ ಅವರು ವಾದ ಮಂಡಿಸಿದರು.

ಪ್ರಕರಣದ ಸ್ವಭಾವ ಹಾಗು ಲೈಂಗಿಕ ದೌರ್ಜನ್ಯದ ಆರೋಪದಲ್ಲಿ ಶಿವಕುಮಾರ್ ಪ್ರತ್ಯಕ್ಷ ಭಾಗಿದಾರನಲ್ಲದಿರುವುದರಿಂದ ಆತನನ್ನು ಮಾಫಿ ಸಾಕ್ಷಿಯನ್ನಾಗಿ ಪರಿಗಣಿಸಲು ಸಾಧ್ಯವಿಲ್ಲ ಎಂದು 42ನೇ ಎಸಿಜೆಎಂ ಕೋರ್ಟ್ ಅರ್ಜಿಯನ್ನು ವಜಾಗೊಳಿಸಿತು.

# ಕನಿಷ್ಟ ವೇತನಕ್ಕೆ ಆಗ್ರಹಿಸಿ ಗ್ರಾ.ಪಂ. ನೌಕರರ ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ಗ್ರಾಮ ಪಂಚಾಯಿತಿ ನೌಕರರಿಗೆ ಪರಿಷ್ಕೃತ ಕನಿಷ್ಟ ವೇತನ ಜಾರಿಗೊಳಿಸಬೇಕೆಂದು ಆಗ್ರಹಿಸಿ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದಿಂದ ಸಿಐಟಿಯು ನೇತೃತ್ವದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಹೇಮಾವತಿ ಪ್ರತಿಮೆಯಿಂದ ಮೆರವಣಿಗೆಯಲ್ಲಿ ಬಂದ ಪ್ರತಿಭಟನಾಕಾರರು ಜಿಲ್ಲಾ ಪಂಚಾಯಿತಿ ಎದುರು ಧರಣಿ ಕುಳಿತರು. ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್ ಅವರು ಮಾತನಾಡಿ, ಗ್ರಾಮ ಪಂಚಾಯಿತಿ ನೌಕರರಿಗೆ ವೈಜ್ಞಾನಿಕ ಕನಿಷ್ಟ ವೇತನ ಜಾರಿಗೊಳಿಸುವಂತೆ 2021-22ನೇ ಸಾಲಿನಿಂದಲೂ ಸರ್ಕಾರಕ್ಕೆ ಮನವಿ ಸಲ್ಲಿಸುವುದರ ಜೊತೆಗೆ ನ್ಯಾಯಾಲಯ ಹಾಗು ಬಹಿರಂಗ ಹೋರಾಟ ನಡೆಸುತ್ತಿದ್ದರೂ ಸರ್ಕಾರಗಳು ಗಂಭೀರವಾಗಿ ಪರಿಗಣಿಸುತ್ತಿಲ್ಲವೆಂದರು.

2022ರ ಜು. 28 ರಂದು ನಗರ ಸ್ಥಳೀಯ ಸಂಸ್ಥೆಗಳು ಹಾಗು ಪಂಚಾಯತ್ ರಾಜ್ ಸಂಸ್ಥೆಗಳ ಅನುಸೂಚಿತ ಉದ್ದಿಮೆಗೆ ಕನಿಷ್ಟ ವೇತನ ಪರಿಷ್ಕರಿಸಿ ಸರ್ಕಾರ ಅಧಿಸೂಚನೆ ಹೊರಡಿಸಿತ್ತು. ಈ ಸಂಬಂಧ ಹೈಕೋರ್ಟ್‌ನಲ್ಲಿ ದಾಖಲಾಗಿದ್ದ ರಿಟ್ ಅರ್ಜಿ ನಂತರ ಸುಪ್ರೀಂ ಕೋರ್ಟ್‌ನ ರೆಪ್ತಕೋಸ್ ಬ್ರೆಟ್ ಪ್ರಕರಣದ ಮಾರ್ಗಸೂಚಿ ಅನುಸರಿಸಿ ಹೊಸ ಅಧಿಸೂಚನೆ ಹೊರಡಿಸುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಲಾಗಿತ್ತು. ನ್ಯಾಯಾಲಯದ ನಿರ್ದೇಶನದಂತೆ 2025ರ ಏ.11 ರಂದು ಕರಡು ಅಧಿಸೂಚನೆ ಪ್ರಕಟಿಸಿತ್ತು. ಸಂಘದ ಆಕ್ಷೇಪಣೆ ಹಾಗು ಕನಿಷ್ಟ ವೇತನ ಸಲಹಾ ಮಂಡಳಿ ಚರ್ಚೆಗಳ ಬಳಿಕ ಮುಖ್ಯಮಂತ್ರಿ ಅವರ ಅನುಮೋದನೆಯೊಂದಿಗೆ ಕಾರ್ಮಿಕ ಇಲಾಖೆ 2026ರ ಮೇ 22 ರಂದು ಪರಿಷ್ಕೃತ ಕನಿಷ್ಟ ವೇತನ ಜಾರಿಗೊಳಿಸಿ ಅಂತಿಮ ಆದೇಶ ಹೊರಡಿಸಿದೆ.

ಈ ಆದೇಶ ಜಾರಿಗೆ ಅಡ್ಡಿಪಡಿಸುವ ಪ್ರಯತ್ನ ನಡೆದಿದ್ದರಿಂದ ಸಂಘದ ವತಿಯಿಂದ ಮೇ 25ರಂದು ರಾಜ್ಯದ ಮೂರು ಹೈಕೋರ್ಟ್ ಪೀಠಗಳಲ್ಲಿ ಕೇವಿಯೆಟ್ ದಾಖಲಿಸಲಾಗಿದೆ. ಪ್ರಕರಣ ವಿಚಾರಣೆಯಲ್ಲಿದ್ದರೂ ಮೇ 22 ರಂದು ಹೊರಡಿಸಿರುವ ಕನಿಷ್ಟ » **ನಾಲ್ಕನೇ ಪುಟದಲ್ಲಿ**




## ಮಹಿಳೆ ನಿಂದನೆ ಪ್ರಶ್ನಿಸಿದ್ದಕ್ಕೆ ಹಲ್ಲೆ

ಅರಸೀಕೆರೆ: ಮಹಿಳೆಯನ್ನು ಅವಾಚ್ಯ ಪದಗಳಿಂದ ನಿಂದಿಸಿದ್ದನ್ನು ಪ್ರಶ್ನಿಸಿದ್ದಕ್ಕೆ ವ್ಯಕ್ತಿಯೊಬ್ಬ ಚಾಕುವಿನಿಂದ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ಸುಬ್ರಹ್ಮಣ್ಯ ನಗರದಲ್ಲಿ ಸೋಮವಾರ ನಡೆದಿದೆ.
ನಗರದ ಜೆಮ್ಸ್ ಗಾಯಾಳು. ವಿನ್ಸಂಟ್ ರಾಜ್ ಎಂಬಾತ ಹಲ್ಲೆ ನಡೆಸಿದ್ದಾನೆ. ಶಿವಪ್ಪ ಎಂಬುವವರ ಮಗಳ ಬಗ್ಗೆ ವಿನ್ಸಂಟ್ ರಾಜ್ ಕೆಟ್ಟದಾಗಿ ಮಾತನಾಡಿದ್ದ. ಅದನ್ನು ಪ್ರಶ್ನಿಸಲೆಂದು ಆತನ ಮನೆಗೆ ಅರುಣ್ ಮತ್ತು ಜೇಮ್ಸ್ ತೆರಳಿದ್ದರು. ಈ ವೇಳೆ ಮಾತಿಗೆ ಮಾತು ಬೆಳೆದು ಏಕಾಏಕಿ ಜೇಬಿನಿಂದ ಚಾಕು ತೆಗೆದು ಜೇಮ್ಸ್‌ನ ಹೊಟ್ಟೆಗೆ ಇರಿದಿದ್ದಾನೆ. ಪರಿಸ್ಥಿತಿ ವಿಕೋಪಕ್ಕೆ ತಿರುಗುತ್ತಿದ್ದಂತೆ ಅರುಣ್, ಪ್ರವೀಣ್, ಭೈರೇಶ್ ಮತ್ತು ಸಂಜಯ್ ಗಲಾಟೆ ಬಿಡಿಸಿ ಗಾಯಾಳು ಜೆಮ್ಸ್‌ನನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ವಿದ್ಯಾರ್ಥಿಗಳು ಶಿಕ್ಷಕರ ಮಾರ್ಗದರ್ಶನದಲ್ಲಿ ನಡೆಯಿರಿ

• ಪ್ರಜೋದಯ ವರದಿ

**ಹಾಸನ :** ವಿದ್ಯಾರ್ಥಿಗಳಿಗೆ ಪ್ರಾಧ್ಯಾಪಕರುಗಳೇ ಎರಡನೇ ತಂದೆ-ತಾಯಿ ಇದ್ದಂತೆ, ವಿದ್ಯಾರ್ಥಿಗಳು ಮೊಬೈಲ್ ಮತ್ತು ಮಾದಕ ವಸ್ತುಗಳ ವ್ಯಸನಿಗಳಾಗದೆ ಪೋಷಕರು ಮತ್ತು ಪ್ರಾಧ್ಯಾಪಕರ ಮಾರ್ಗದರ್ಶನದಂತೆ ನಡೆದು ಜೀವನವನ್ನು ಸಾರ್ಥಕವಾಗಿಸಿಕೊಳ್ಳುವಂತೆ ಸಂಸದರಾದ ಶ್ರೇಯಸ್ ಎಂ ಪಟೇಲ್ ರವರು ತಿಳಿಸಿದ್ದಾರೆ.

ನಗರದ ಸರ್ಕಾರಿ ಇಂಜಿನೀಯರಿಂಗ್ ಕಾಲೇಜಿನಲ್ಲಿ ನಶಾ ಮುಕ್ತ ಭಾರತ ಅಭಿಯಾನದ 6ನೇ ವರ್ಷದ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ತಮ್ಮ ಸ್ನೇಹಿತರು ಮಾದಕ ವಸ್ತುಗಳ ವ್ಯಸನಕ್ಕೆ ಬಲಿಯಾದ ನೈಜ್ಯ ಘಟನೆಗಳನ್ನು ಉದಾಹರಣೆ ನೀಡಿ ವಿದ್ಯಾರ್ಥಿಗಳಿಗೆ ತಿಳಿಸಿದರು.

ಹಿರಿಯ ಸಿವಿಲ್ ನ್ಯಾಯಾಧೀಶರಾದ ದಾಕ್ಷಾಯಿಣಿ ಜಿ.ಕೆ. ಅವರು ಮಾತನಾಡಿ, ಗುರುಗಳು ಪಾಠ ಮಾಡುವುದರ ಜೊತೆಗೆ, ವಿದ್ಯಾರ್ಥಿಗಳಿಗೆ ಜೀವನಕ್ಕೆ ಬೇಕಾದ ಒಳ್ಳೆಯ ಸಂಸ್ಕಾರಗಳನ್ನು ಕೂಡ ಬೋಧಿಸುತ್ತಿದ್ದಾರೆ. ಪ್ರತಿಯೊಬ್ಬ ಪೋಷಕರಿಗೂ ತಮ್ಮ ಮಕ್ಕಳು ಸಮಾಜಕ್ಕೆ ಒಳ್ಳೆಯ ವ್ಯಕ್ತಿಗಳಾಗಿ ರೂಪುಗೊಳ್ಳಬೇಕೆಂಬ ಬಯಕೆ ಇರುತ್ತದೆ. ಜೀವನಕ್ಕೆ ಹಾನಿ ಮಾಡುವ ಕೆಲಸ-ಕಾರ್ಯಗಳನ್ನು ವಿದ್ಯಾರ್ಥಿಗಳು ಮಾಡಬಾರದು. ತಂದೆ-ತಾಯಿಯರಿಗೆ ಒಳ್ಳೆಯ ಮಕ್ಕಳಾಗಿ ಬಾಳಬೇಕು ಹಾಗೂ ಎನ್‌ಡಿಪಿಎಸ್ ಆಕ್ಟ್ ಬಗ್ಗೆ ವಿವರಿಸುತ್ತಾ ವಾಣಿಜ್ಯವಾಗಿ ಕಾನೂನಿಗೆ ಬಾಹಿರವಾಗಿರುವ ಮಾದಕ ದ್ರವ್ಯಗಳನ್ನು ಮಾರಾಟ ಮಾಡುವವರಿಗೆ 30 ವರ್ಷಗಳು ಅಥವಾ ಜೀವಾವಧಿ ಶಿಕ್ಷೆಯನ್ನು ನೀಡಬಹುದು ಮತ್ತು ಮಾದಕ ವಸ್ತುಗಳ ಮಾರಾಟ, ಸೇವನೆ, ಕಳ್ಳ ಸಾಗಣಿಕೆ » **ನಾಲ್ಕನೇ ಪುಟದಲ್ಲಿ**




## ಆ.24, 25 ರಂದು ಉದ್ಯೋಗ ಮೇಳ




• ಪ್ರಜೋದಯ ವರದಿ

**ಹಾಸನ:** ನಗರದ ಸೇಂಟ್ ಜೋಸೆಫ್ ಕಾಲೇಜಿನಲ್ಲಿ ಆ.24, 25 ರಂದು ಉಚಿತ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜಿನ ಆಡಳಿತ ಮಂಡಳಿಯ ಫಾದರ್ ಎಸ್.ಜೆ.ಆಲ್ವಿನ್ ವೇಗಸ್ ಅವರು ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪದವೀಧರರಿಗೆ ಅವಕಾಶ ಕಲ್ಪಿಸಲಾಗಿದೆ. ಉದ್ಯೋಗ ಮೇಳದಲ್ಲಿ 20ಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳಿಂದ ಸಂದರ್ಶನ ನಡೆಯಲಿದೆ. ಕಳೆದ ಬಾರಿ ನಮ್ಮ ಕಾಲೇಜಿಗೆ ಮಾತ್ರ ಸೀಮಿತವಾಗಿತ್ತು. ಈ ಬಾರಿ ಜಿಲ್ಲೆಯ ಎಲ್ಲರಿಗೂ ಅವಕಾಶ ಒದಗಿಸಲಾಗಿದೆ ಎಂದು ಹೇಳಿದರು.

ಪ್ರಾಧ್ಯಾಪಕ ಪ್ರದೀಪ್ ಕುಮಾರ್ ಮಾತನಾಡಿ, ಉದ್ಯೋಗ ಮೇಳಕ್ಕೂ ಮುನ್ನ ಉತ್ತಮ ರೆಸ್ಯೂಮ್ ತಯಾರಿಕೆ, ಸಂದರ್ಶನ ಕೌಶಲ್ಯ, ಸಂವಹನ ಕೌಶಲ್ಯ ಮತ್ತು ಸಾಫ್ಟ್ ಸ್ಕಿಲ್ಸ್ ಬಗ್ಗೆ ಆ.24 ರಂದು ಉದ್ಯೋಗ ಪೂರ್ವ ತರಬೇತಿಯನ್ನೂ ಹಮ್ಮಿಕೊಳ್ಳಲಾಗಿದೆ. ಇದೆಲ್ಲವೂ ಉಚಿತವಾಗಿ ನಡೆಯಲಿದೆ ಎಂದರು.

ಕನ್ನಡ ಪ್ರಾಧ್ಯಾಪಕ ರಂಗೇಗೌಡ ಅವರು ಮಾತನಾಡಿ, ಮೈಸೂರು, ಬೆಂಗಳೂರು ಮೊದಲಾದ ಕಡೆಗಳಿಂದ ವಿವಿಧ ಕಂಪನಿಗಳು ಆಗಮಿಸಿ ಅಭ್ಯರ್ಥಿಗಳು ನೇರ ಸಂದರ್ಶನ ನಡೆಸಲಿದ್ದಾರೆ. ಬಿಬಿಎ, ಬಿ.ಕಾಂ, ಬಿಸಿಎ, ಬಿಎ, ಬಿಎಸ್‌ಸಿ, ಬಿಇ, ಬಿಟೆಕ್, ಎಂಎ, ಎಂಬಿಎಂ, ಎಂ.ಕಾಂ, ಎಂಸಿಎ ಹಾಗೂ ಎಂಟೆಕ್ ಸೇರಿ ಸಮಾನ ವಿದ್ಯಾರ್ಹತೆ ಹೊಂದಿರುವವರು ಮೇಳದಲ್ಲಿ ಭಾಗಿಯಾಗಲು ಅರ್ಹರೆಂದು ತಿಳಿಸಿದರು.

ಗ್ರಂಥಾಲಯ ವಿಭಾಗದ ಶಶಿಕಲಾ, ಕಂಪನಿಯ ಬಸಪ್ಪ, ನಿಖಿಲ್ ತೇಜಸ್ ಇದ್ದರು.

## ಕಾಂಗ್ರೆಸ್‌ಗೆ ರೈತರ ಬಗ್ಗೆ ಕಾಳಜಿ ಇಲ್ಲ: ಹೆಚ್.ಕೆ.ಕುಮಾರಸ್ವಾಮಿ ಆರೋಪ

# ಬರ ಪರಿಸ್ಥಿತಿ ನಿಭಾಯಿಸುವಲ್ಲಿ ಸರ್ಕಾರ ವಿಫಲ

• ಪ್ರಜೋದಯ ವರದಿ

**ಹಾಸನ:** ರೈತರ ಬಗ್ಗೆ ಕಾಳಜಿ ಇಲ್ಲದ ಕಾಂಗ್ರೆಸ್ ಸರ್ಕಾರ, ರಾಜ್ಯದಲ್ಲಿನ ಬರ ಪರಿಸ್ಥಿತಿ ನಿಭಾಯಿಸುವಲ್ಲಿ ವಿಫಲವಾಗಿದೆ ಎಂದು ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಅವರು ದೂರಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿ ಮಲೆನಾಡು ಭಾಗದಲ್ಲೂ ಬರ ಪರಿಸ್ಥಿತಿ ಎದುರಾಗಿದೆ. ಏಪ್ರಿಲ್, ಮೇ, ಜೂನ್‌ನಲ್ಲಿ ಮಳೆಯೇ ಬಂದಿಲ್ಲ. ಶೇ.60 ರಷ್ಟು ಮಳೆ ಕೊರತೆ ಆಗಿದೆ ಎಂದು ಸರ್ಕಾರವೇ ಹೇಳಿದೆ. ಆದರೆ, ಸರ್ಕಾರಕ್ಕೆ ಇನ್ನೂ ಬರ ಅಧ್ಯಯನ ಮುಗಿಸಲು ಆಗಿಲ್ಲ. ಕೂಡಲೇ ಸರ್ಕಾರ ಎಚ್ಚೆತ್ತುಕೊಂಡು ಜಿಲ್ಲೆಯನ್ನು ಬರಪೀಡಿತ ಎಂದು ಘೋಷಣೆ ಮಾಡಬೇಕೆಂದು ಒತ್ತಾಯಿಸಿದರು.

ಜೂ.3 ರಂದು ಮುಖ್ಯಮಂತ್ರಿ ಪ್ರಮಾಣ ವಚನ ಸ್ವೀಕರಿಸಿದರು. ನಂತರ ಎರಡು ತಿಂಗಳ ವರೆಗೆ ಸಂಪುಟ ವಿಸ್ತರಣೆ ಕಸರತ್ತು ನಡೆಯಿತು. ನಂತರ ಖಾತೆಗಾಗಿ ಕಿತ್ತಾಟ ನಡೆಯಿತು. ಕೆ.ಎಂ.ಶಿವಲಿಂಗೇಗೌಡ ಅವರು ಸಚಿವರಾಗಿರುವುದನ್ನು ನಾವು ಸ್ವಾಗತಿಸುತ್ತೇವೆ. ಅವರೂ ರೈತರ ಬಗ್ಗೆ ಹೆಚ್ಚಾಗಿ ಮಾತನಾಡುತ್ತಾರೆ. ಅವರೂ ಜಿಲ್ಲೆಯ ಪರಿಸ್ಥಿತಿಯನ್ನು ಸರ್ಕಾರಕ್ಕೆ ತಿಳಿಸಿಲ್ಲ. ಈ ಸರ್ಕಾರಕ್ಕೆ ರೈತರ ಬಗ್ಗೆ ಕಾಳಜಿ ಇಲ್ಲ, ಮುಕ್ಕಾಲು ಭಾಗ ಹೇಮಾವತಿ ಅಣೆಕಟ್ಟೆ ಭರ್ತಿಯಾಗಿದ್ದರೂ, ಕೃಷಿಗೆ ನೀರು ಕೊಡುತ್ತಿಲ್ಲ. ಕಳೆದ ಎರಡು ದಿನಗಳಿಂದ ನಾಲೆಗಳಿಗೆ ನೀರು ಬಿಡಲಾಗಿದೆ. ಜಾನುವಾರುಗಳಿಗೆ ಮೇವಿಲ್ಲ, ಕುಡಿಯಲು ನೀರಿಲ್ಲ, ಶೇ.75ಕ್ಕೂ ಅಧಿಕ ಮೆಕ್ಕೆ ಜೋಳ ಬಿಳಿಸುಳಿಯಿಂದ ಹಾಳಾಗಿದೆ. ಪರಿಸ್ಥಿತಿ ಹೀಗಿದ್ದರೂ ರಾಜ್ಯ ಸರ್ಕಾರ ಬರ ನಿರ್ವಹಣೆ ಮಾಡುವಲ್ಲಿ ಸಂಪೂರ್ಣ ವಿಫಲವಾಗಿದೆ ಎಂದು ದೂರಿದರು.




> **ಜಿಲ್ಲಾಧಿಕಾರಿ ಬ್ಯಾಂಕ್ ಖಾತೆಯಲ್ಲಿ ಹಣ ಇದೆ ಅಂದಾಕ್ಷಣ ಎಲ್ಲವೂ ಆಗುವುದಿಲ್ಲ. ಸರ್ಕಾರ ತಕ್ಷಣ ಕಾರ್ಯ ಪ್ರವೃತ್ತರಾಗಬೇಕು. ಕೂಡಲೇ ಬರ ಪರಿಹಾರ ಕಾಮಗಾರಿಗಳನ್ನು ಆರಂಭಿಸಬೇಕು, ಇಲ್ಲದಿದ್ದರೆ ಪ್ರತಿಭಟನೆ ನಡೆಸಲಾಗುವುದು.**
> **-ಹೆಚ್.ಕೆ.ಕುಮಾರಸ್ವಾಮಿ, ಮಾಜಿ ಸಚಿವ**

### ನ್ಯಾಯಾಂಗ ತನಿಖೆಗೆ ಆಗ್ರಹ

ಹನೂರು ಎನ್‌ಕೌಂಟರ್ ಬಗ್ಗೆ ನ್ಯಾಯಾಂಗ ತನಿಖೆ ನಡೆಯಬೇಕು. ಮೆಜಿಸ್ಟ್ರೇಟರ್‌ಗಳು ಸರ್ಕಾರ ಅಧೀನದಲ್ಲೇ ಇರುವುದರಿಂದ ನ್ಯಾಯವನ್ನು ನಿರೀಕ್ಷೆ ಮಾಡಲು ಸಾಧ್ಯವಿಲ್ಲವೆಂದು ಹೇಳಿದ ಅವರು, ತಮಿಳರನ್ನು ಶೂಟೌಟ್ ಮಾಡಿ ಕೊಲ್ಲಲಾಗಿದೆ ಎಂದು ತಮಿಳುನಾಡು ಮುಖ್ಯಮಂತ್ರಿ ವಿಜಯ್ ಆರೋಪವನ್ನು ಖಂಡಿಸಿದ ಅವರು, ರಾಜಕೀಯ ಅನುಭವ ಕಡಿಮೆ ಇರುವುದರಿಂದ ಈ ರೀತಿಯ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಸೌಹಾರ್ದತೆ ಕಾಪಾಡುವ ನಿಟ್ಟಿನಲ್ಲಿ ಪ್ರತಿಯೊಬ್ಬರು ಸಹಕರಿಸಬೇಕೆಂದು ಹೇಳಿದರು.

### ನಾಗೇಂದ್ರ ರಾಜೀನಾಮೆ ನೀಡಲಿ

ವಾಲ್ಮೀಕಿ ನಿಗಮದ ಹಗರಣದಿಂದ ಇನ್ನೂ ಕ್ಲೀನ್ ಚಿಟ್ ಪಡೆಯದಿದ್ದರೂ ಮತ್ತೆ ಮಂತ್ರಿಯಾಗಿರುವ ನಾಗೇಂದ್ರ ಅವರು ನೈತಿಕ ಹೊಣೆ ಹೊತ್ತು ಕೂಡಲೇ ರಾಜೀನಾಮೆ ನೀಡಬೇಕು. ಇದೇ ಕಾರಣಕ್ಕೆ ಸಿದ್ದರಾಮಯ್ಯ ಅವರು ರಾಜೀನಾಮೆ ಪಡೆದಿದ್ದರು. ಆದರೆ, ಈಗಿನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಅದೇಕೋ ಹೆದರುತ್ತಿದ್ದಾರೆ ಗೊತ್ತಿಲ್ಲವೆಂದು ಟೀಕಿಸಿದರು.

ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ಭಾಷಣ ಮಾಡಿದ ಸ್ಥಳವನ್ನು ಶುದ್ಧಿ ಮಾಡುವ ಮೂಲಕ ಅಪಮಾನ ಮಾಡಿರುವುದು ಖಂಡನೀಯ. ಈ ಬಗ್ಗೆ ರಾಜ್ಯ » **ನಾಲ್ಕನೇ ಪುಟದಲ್ಲಿ**

## ಪ್ರತ್ಯೇಕ ಅಪಘಾತ : ಇಬ್ಬರ ಸಾವು

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ವಿವಿಧೆಡೆ ನಡೆದ ಪ್ರತ್ಯೇಕ ಅಪಘಾತದಲ್ಲಿ ಇಬ್ಬರು ಮೃತಪಟ್ಟಿರುವ ಘಟನೆ ನಡೆದಿದೆ.

ನಿರ್ಲಕ್ಷ್ಯದ ಚಾಲನೆಯಿಂದ ಟ್ರ್ಯಾಕ್ಟರ್ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ಕೊಣನೂರು-ಸೋಮವಾರಪೇಟೆ ರಸ್ತೆಯ ಸಿದ್ದಾಪುರದಲ್ಲಿ ನಡೆದಿದೆ. ಬನ್ನೂರು ಗ್ರಾಮದ ಡಿ.ಮನು ಮೃತರು. ಆ.16ರ ರಾತ್ರಿ 8.40ರ ವೇಳೆ ಊರಿಗೆ ಹೋಗುತ್ತಿದ್ದಾಗ ಹಿಂದಿನಿಂದ ಬಂದ ಟ್ರ್ಯಾಕ್ಟರ್ ಡಿಕ್ಕಿಯಾಗಿದೆ. ಬೈಕ್ ಸಮೇತ ರಸ್ತೆ ಮೇಲೆ ಬಿದ್ದಿದ್ದರಿಂದ ಗಂಭೀರ ಗಾಯಗೊಂಡಿದ್ದ ಮನು ಅವರನ್ನು ಕೊಣನೂರು ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಕಾರು ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ಮುಗುಳೂರು ಚಾನಲ್ ಸಮೀಪ ನಡೆದಿದೆ. ದೊಡ್ಡಮಗ್ಗೆ ಹೋಬಳಿ ಕಣಿಯಾರು ಗ್ರಾಮದ ಮೋಹನ್ ಮೃತರು. ವಿಳ್ಯದೆಲೆ ಹಾಗು ಅಡಿಕೆ ವ್ಯಾಪಾರಿ ಆಗಿದ್ದ ಅವರು ಆ. 17ರ ಸಂಜೆ 7 ಗಂಟೆಗೆ ಕೆಲಸ ಮುಗಿಸಿ ಮನೆಗೆ ಹೋಗುತ್ತಿದ್ದಾಗ ಎದುರುಗಡೆಯಿಂದ ಬಂದ ಕಾರು ಡಿಕ್ಕಿಯಾಗಿದೆ. ತೀವ್ರ ರಕ್ತಸ್ರಾವವಾದ ಹಿನ್ನಲೆಯಲ್ಲಿ ಮೋಹನ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

CMYK CMYK CMYK CMYK

# ಜೆನ್ ಝೀಯನ್ನು ಸಂಭಾಳಿಸುವುದು ಹೇಗೆ?

> ಇತಿಹಾಸದ ಕಾಲಚಕ್ರವನ್ನು ನಾವು ಹಿಮ್ಮುಖವಾಗಿ ತಿರುಗಿಸಲಾಗುವುದಿಲ್ಲ. ಅಥವಾ ಒಂದು ಮಂತ್ರದಂಡವನ್ನು ತಿರುಗಿಸಿ ಜೆನ್ ಝೀ ಮನಸ್ಸನ್ನು ಹಿಂದೆ ಕೊಂಡು ಹೋಗಲು, ತಿದ್ದಲು, ಆಗುವುದಿಲ್ಲ. ಆಗಿದ್ದು ಆಗಿಯೇ ಹೋಗಿದೆ. ಆದರೂ ಕೂಡ ಉತ್ತರಗಳನ್ನು ಹುಡುಕಿಕೊಳ್ಳಲೇ ಬೇಕು. ನಮಗೆ ಗೊತ್ತಿದೆ.



ಮಂಥನ ಕೆಲ ದಿನಗಳ ಹಿಂದೆ ನನ್ನ ಬರಹ ಮಧ್ಯರಾತ್ರಿಯ ಮಕ್ಕಳ ಮಕ್ಕಳ ಮೊಮ್ಮಕ್ಕಳು ವಿಶ್ವವಾಣಿಯಲ್ಲಿ ಪ್ರಕಟವಾಯಿತು. ಲೇಖನದಲ್ಲಿ ಹೇಳಲಾದ ವಿಷಯ: ಜೆನ್ ಝೀಯದು ಮೌಲ್ಯಗಳ, ಸಂಸ್ಕೃತಿಯ, ಇತಿಹಾಸದ ಚೌಕಟ್ಟಿನಿಂದ ಮುಕ್ತವಾದ ಮನಸ್ಥಿತಿ. ಬೇಲಿಗಳಿಲ್ಲದ ಮನಸ್ಸು. ಹಿಂದಿನ ಪೀಳಿಗೆಗೆ ಇರುವಂತೆ ಹಿರಿಯರ ಕುರಿತಾದ ಭಯ ಸಹನೆ, ಗೌರವ, ಇಂತಹ ಭಾವನೆಗಳ ನಿಯಂತ್ರಣದಲ್ಲಿ ಜೆನ್ ಝೀ ಕೆಲಸ ಮಾಡುತ್ತದೆ ಎಂದು ಹೇಳಲಾಗುವುದಿಲ್ಲ. ಮನೆಯಲ್ಲಿ ಜೆನ್ ಝೀ ತಂದೆ ತಾಯಿಗಳನ್ನು ನಿಯಂತ್ರಿಸುತ್ತದೆ. ಮಾತು ಕೇಳಿಸುತ್ತದೆ. ಅವರು ಕೇಳದಿದ್ದರೆ ತೀವ್ರ ಡಿಪ್ರೆಸ್ ಆಗುತ್ತದೆ. ಆತ್ಮಹತ್ಯೆಗೂ ಪ್ರಯತ್ನಿಸುತ್ತದೆ. ಅಥವಾ ಅಂತಹ ಧಮಕಿ ನೀಡಿ ಬಗ್ಗಿಸುತ್ತದೆ. ಹೊರಗಡೆಯೂ ಅದು ಅಂತಹುದೇ ವಾತಾವರಣವನ್ನು ಬಯಸುತ್ತದೆ. ಸುಖವನ್ನು ಬಯಸುತ್ತದೆ.

ತನಗೆ ಬೇಕಾದ್ದನ್ನು ಪಡೆಯಲು ಏನು ಬೇಕಾದರೂ ಮಾಡುತ್ತದೆ. ಬಹಳ ಭಾವನಾತ್ಮಕವಾಗಿ, ಅತಿರೇಕದಲ್ಲಿ ಯೋಚಿಸುತ್ತದೆ. ಅದರ ಚಿಂತನೆ ಒಳಗೆ ಕೆಲವು ವಿರೋಧಾಭಾಸಗಳು ಇದ್ದರೂ ಕೂಡ ಇಡೀ ಭಾರತದ (ಒಂದು ರೀತಿಯಲ್ಲಿ ಜಗತ್ತಿನ ಜೆನ್ ಝೀ) ಒಂದೇ ರೀತಿಯಲ್ಲಿ ಯೋಚಿಸುತ್ತದೆ. ತನ್ನವರೊಡನೆ ತ್ವರಿತವಾಗಿ ಕಮ್ಯುನಿಕೇಟ್ ಮಾಡುತ್ತದೆ. ಯೋಚನೆಯಿಲ್ಲದ ಕ್ರಿಯೆಯಲ್ಲಿ ತೊಡಗಲೂ ಹಿಂದೆ ಮುಂದೆ ನೋಡುವುದಿಲ್ಲ. ಏನೇನೋ ಮಾಡಿಬಿಡುತ್ತದೆ. ಅಥವಾ ಆ ಸಂಭವಿರುತ್ತದೆ.

ಮುಗ್ಧ ಆದರ್ಶವಾದ ಕೂಡ ಅದಕ್ಕಿದೆ. ಹಾಗಾಗಿ ಸಾರ್ವಜನಿಕ ಹೋರಾಟಗಳಿಗಾಗಿ ಅದು ಬೀದಿಗಿಳಿದು ಬಿಡುತ್ತದೆ. ಹೋರಾಟವನ್ನು ಎಂಜಾಯ್ ಮಾಡುತ್ತದೆ. ಏನು ಬೇಕಾದರೂ ಮಾಡಿ ಬಿಡುತ್ತದೆ. ಆ ಮನಸ್ಸಿಗೆ ದೀರ್ಘಕಾಲೀನ, ದೂರಗಾಮಿ ಯೋಜನೆ ಇತ್ಯಾದಿ ಇಲ್ಲ. ಅದಕ್ಕೆ ಸಂವಿಧಾನ, ಪ್ರೊಸೀಜರ್‌ಗಳು, ಪದ್ಧತಿಗಳು ಇಂಥವುಗಳ ಕುರಿತು ತಿರಸ್ಕಾರವಿದೆ.

ಏಕೆಂದರೆ ವೇಗಕ್ಕೆ ಅದು ಬೆಲೆ ಕೊಡುತ್ತದೆ. ಅದರ ಯೋಚನೆಯ ದಾರಿಯಲ್ಲಿ ಅರಾಜಕತೆ ಸೃಷ್ಟಿಯಾಗಿ ಹೋಗಬಹುದು, ಇತ್ಯಾದಿ ಅದು ಯೋಚಿಸುವುದಿಲ್ಲ. ಹಿಂದಿಗಿಂತ ಕೆಟ್ಟ ಸರಕಾರಗಳು ಬಂದುಬಿಡ ಬಹುದು. ಬೇಡವಾದ ರೀತಿಯ ಸಮಾಜ ಸೃಷ್ಟಿಯಾಗಿ ಹೋಗಿ ಬಿಡಬಹುದು ಇತ್ಯಾದಿ ಅದರ ಖಬರಿಗಿಲ್ಲ. ಅದೆಲ್ಲಕ್ಕೆ ಅದಕ್ಕೆ ಪುರುಸೊತ್ತಿಲ್ಲ. ಇದನ್ನು ನಾವು ಶ್ರೀಲಂಕಾದ, ಬಾಂಗ್ಲಾ ದೇಶದ, ನೇಪಾಳದ ಯುವ ಕ್ರಾಂತಿಗಳಲ್ಲಿ ನೋಡಿದ್ದೇವೆ. ಒಟ್ಟಾರೆಯಾಗಿ, ಅದು ಅಮೆರಿಕನ್ ರೀತಿಯ ಜೀವನವನ್ನು ಬಯಸುವ, ಬಹಳ ದೊಡ್ಡ ಆಶೋತ್ತರಗಳಿರುವ, ಆಸೆ ಆಮಿಷಗಳಿರುವ, ಸಿಗದಿದ್ದರೆ ತೀವ್ರ ಸಿಟ್ಟಾಗುವ ಪೀಳಿಗೆ. ಈ ಬರಹ ಪ್ರಕಟವಾದ ನಂತರ ನನಗೆ ಬಂದ ಹಲವು ಸಂದೇಶಗಳು ಒಂದೇ ಪ್ರಶ್ನೆಯನ್ನು ಎತ್ತಿದವು.

ಹಾಗಾದರೆ ಇಂತಹ ಜೆನ್ ಝೀಯನ್ನು ಹ್ಯಾಂಡಲ್ ಮಾಡಲು ಸರಕಾರ, ಸಮಾಜ, ಕುಟುಂಬ ವ್ಯವಸ್ಥೆ ಏನು ಮಾಡಬಹುದು? ಮಾಡಬೇಕು? ಪ್ರಶ್ನೆ ಸರಳವಾದುದು. ಆದರೆ ಉತ್ತರ ಸರಳವಾದುದಲ್ಲ. ಏಕೆಂದರೆ ಈ ಮಾನಸಿಕತೆ ಸೃಷ್ಟಿಯಾಗಿದ್ದು ಹಲವು ಸಂಕೀರ್ಣ ರಾಜಕೀಯ, ಸಾಮಾಜಿಕ, ವೈಜ್ಞಾನಿಕ, ಮಹಿಳಾ ವಾದ ಇತ್ಯಾದಿ ಹಲವು ಸಮಕಾಲೀನ ಪ್ರಭಾವಗಳ ಎಳೆಗಳು ಸೇರಿ. ಈಗ ಇಂತಹ ಸಂಕೀರ್ಣ ಮನಸ್ಥಿತಿ ಸೃಷ್ಟಿಯಾಗಿಯೇ ಹೋಗಿದೆ.

ಇತಿಹಾಸದ ಕಾಲಚಕ್ರವನ್ನು ನಾವು ಹಿಮ್ಮುಖವಾಗಿ ತಿರುಗಿಸಲಾಗುವುದಿಲ್ಲ. ಅಥವಾ ಒಂದು ಮಂತ್ರದಂಡವನ್ನು ತಿರುಗಿಸಿ ಜೆನ್ ಝೀ ಮನಸ್ಸನ್ನು ಹಿಂದೆ ಕೊಂಡು ಹೋಗಲು, ತಿದ್ದಲು, ಆಗುವುದಿಲ್ಲ. ಆಗಿದ್ದು ಆಗಿಯೇ ಹೋಗಿದೆ. ಆದರೂ ಕೂಡ ಉತ್ತರಗಳನ್ನು ಹುಡುಕಿಕೊಳ್ಳಲೇ ಬೇಕು. ನಮಗೆ ಗೊತ್ತಿದೆ. ಒಂದು ದೊಡ್ಡ ಸೂಪರ್ ಪವರ್ ದೇಶ ನಮ್ಮ ದೇಶದ ರಾಜಕೀಯವನ್ನು ತನ್ನ ಹತೋಟಿಗೆ ತೆಗೆದುಕೊಳ್ಳಲು ಬಯಸುತ್ತಿದೆ.

ನಮ್ಮ ಜೆನ್ ಝೀ ಅದರ ಬಲೆಗೆ ಬೀಳಬಾರದು. ತಾಳ ತಪ್ಪಿ ನೇಪಾಳ, ಬಾಂಗ್ಲಾದೇಶ ರೀತಿಯಲ್ಲಿ ನಡೆದು ಬಿಡಬಾರದು. ಈ ಹಿನ್ನೆಲೆಯಲ್ಲಿ ನಾವು ಜೆನ್ ಝೀಯನ್ನು ಹೇಗೆ ಮ್ಯಾನೇಜ್ ಮಾಡಬಹುದು ಎಂದು ಯೋಚಿಸಬೇಕು. ಒಂದನೆಯ ವಿಷಯ. ಜೆನ್ ಝೀ ಹೇಗೆ ಯೋಚಿಸುತ್ತದೆ ಮತ್ತು ಏನು ಯೋಚಿಸುತ್ತಿದೆ ಎನ್ನುವ ವಿಷಯಗಳು ನಮಗೆ ಈಗ ತಿಳಿದಿವೆ. ಅದು ಪ್ರಗತಿ, ಸುಖ, ಸಂತೋಷ, ಸೌಲಭ್ಯ ಬಯಸುತ್ತದೆ. ತನ್ನ ದೇಶ ಬೇರೆ ದೇಶಗಳ ಹಾಗೆ ಪ್ರಬಲವಾಗಿ ಇರಬೇಕೆಂದೂ ಬಯಸುತ್ತದೆ.

ಹಾಗೆಯೇ ನಮಗೆ ಗೊತ್ತು. ಅದಕ್ಕೆ ಇಂದು ಯಾರ ಮೇಲೆಯೂ ನಂಬಿಕೆ ಇಲ್ಲ. ಮುಖ್ಯವಾಗಿ ರಾಜಕೀಯ, ಸಾಮಾಜಿಕ, ಧಾರ್ಮಿಕ ನೇತಾರರ ಮೇಲೆ ಅದಕ್ಕೆ ಭರವಸೆ ಇಲ್ಲ. ನಂಬಿಕೆ ಇಲ್ಲ. ಈ ನಾಯಕರೇ ತನ್ನ ಪರಿಸ್ಥಿತಿಯನ್ನು ಇಲ್ಲಿಗೆ ತಂದಿಟ್ಟಿದ್ದು ಎಂದು ಅದು ಭಾವಿಸುತ್ತದೆ. ಇಲ್ಲವಾದರೆ ನಮ್ಮ ದೇಶ ಅಮೆರಿಕದ ರೀತಿಯಲ್ಲಿ ಬಲಿಷ್ಠ ದೇಶವಾಗಿರುತ್ತಿತ್ತು. ನಮ್ಮೆಲ್ಲರ ಬಳಿಯೂ ಅಮೆರಿಕದ ರೀತಿಯ ಸಾಧನಗಳು, ಸಂಪತ್ತು ಅನುಕೂಲತೆಗಳು ಇರುತ್ತಿದ್ದವು ಎಂಬುದು ಅದರ ಮನಸ್ಸಿನಲ್ಲಿದೆ.

ನಾವು, ಅಂದರೆ ಈಗಿನ ಹಿರಿಯ ನಾಗರಿಕರು ಒಪ್ಪಿಕೊಳ್ಳಬೇಕು. ಏನೆಂದರೆ ಜೆನ್ ಝೀಯ ವಿಚಾರಗಳು, ವಾದಗಳಲ್ಲಿ ಬಹಳ ತಪ್ಪೇನೂ ಇಲ್ಲ. ಅದು ಹೇಳುವುದರಲ್ಲಿ, ಭಾವಿಸುವುದರಲ್ಲಿ ಬಹಳ ಮಟ್ಟಿಗೆ ಸತ್ಯವಿದೆ. ನಮ್ಮ ಪೀಳಿಗೆ ಮತ್ತು ಹಿಂದಿನ ಪೀಳಿಗೆಗಳು ಹೆಚ್ಚು ಜವಾಬ್ದಾರಿಯುತವಾಗಿ ಕೆಲಸಮಾಡಿದ್ದರೆ ಜೆನ್ ಝೀಯ ಸಾರ್ವಜನಿಕ ಬದುಕು ಇನ್ನೂ ಹೆಚ್ಚು ಸುಗಮವಾಗಿರುತ್ತಿತ್ತು. ಇದರಲ್ಲಿ ಮಾತಿಲ್ಲ. ವ್ಯಾಪಕವಾದ ರಾಜಕೀಯ ಭ್ರಷ್ಟಾಚಾರ, ಜವಾಬ್ದಾರಿರಹಿತ ರಾಜಕೀಯ ನಮ್ಮ ದೇಶವನ್ನು ಸುದೀರ್ಘ ಕಾಲ ಕಾಡಿವೆ. ಸಂಸತ್ತು, ವಿಧಾನಸಭೆಗಳು ಗದ್ದಲದ ಹೊಳೆಗಳಲ್ಲಿ ಕೊಚ್ಚಿ ಹೋಗುತ್ತಿವೆ.

ಸಾವಿರಾರು ಕೋಟಿ ರೂಪಾಯಿಗಳ ಭ್ರಷ್ಟಾಚಾರ ದಾಖಲೆಗಳಲ್ಲಿ ಇದ್ದರೂ ಕೂಡ ಅಂತಹ ರಾಜಕಾರಣಿಗಳಿಗೆ ಶಿಕ್ಷೆಯಾಗುವುದಿಲ್ಲ. ರಾಜಕಾರಣಿಗಳು, ರಾಜಕೀಯದ ಸುತ್ತಮುತ್ತ ಇರುವವರು ಅಕಸ್ಮಾತ್ ಅಂದರೆ ರಾತ್ರಿ ಬೆಳಗಾಗುವ ತನಕ ಭಾರಿ ಶ್ರೀಮಂತರಾಗಿ ಹೋಗುತ್ತಾರೆ. ಅವರಿಗೆಲ್ಲ ಇನ್ ಕಮ್ ಟ್ಯಾಕ್ಸ್ ಇತ್ಯಾದಿ ಕಾನೂನುಗಳು ಅನ್ವಯವಾಗುತ್ತಿರುವಂತಿಲ್ಲ. ರಸ್ತೆಗಳು, ಶಾಲೆಗಳು, ಆಸ್ಪತ್ರೆಗಳು ದುಸ್ಥಿತಿಯಲ್ಲಿವೆ. ಕುಡಿಯುವ ನೀರಿನ ಕೊಳವೆಗಳಿವೆ. ಆದರೆ ನೀರು ಬರುವುದಿಲ್ಲ.

ತುಂಬಿದ ಡ್ಯಾಮ್‌ನ ಗೇಟುಗಳು ಮಳೆಗಾಲಗಳಲ್ಲಿ ಕಿತ್ತು ಹೋಗುತ್ತವೆ. ಸರಕಾರಿ ಕಚೇರಿಗಳಲ್ಲಿ ಭ್ರಷ್ಟತೆ ತಾಂಡವವಾಡುತ್ತಿವೆ. ಚಿಕ್ಕ ಚಿಕ್ಕ ವಿಷಯಗಳಿಗೆ ಅಲ್ಲಿಗೆ ಅಲೆದಾಡಿ ಜನ ಸೋತು ಹೋಗುತ್ತಾರೆ. ಭಾರಿ ಟಾಕ್ಸೇಶನ್ ಇದೆ. ಜಿಎಸ್‌ಟಿ ಕಾರಣ ಮನೆಯಿಂದ ಹೊರಬಿದ್ದರೆ ಟ್ಯಾಕ್ಸ್ ಬೀಳುತ್ತದೆ. ನಗರಗಳು ಗಲೀಜಿನಿಂದ ತುಂಬಿ ಹೋಗಿವೆ. ಐದು ಕಿಲೋಮೀಟರ್ ಹೋಗಲು ಎರಡು ತಾಸು ಬೇಕಾಗುತ್ತದೆ. ಶಿಕ್ಷಣ ವ್ಯವಸ್ಥೆಗೆ ನಿಜ ಜೀವನಕ್ಕೆ ಸಂಬಂಧವೇ ಇಲ್ಲ. ಸರಕಾರಿ ನೌಕರಿಗಳು ಇಲ್ಲ.

ಖಾಸಗಿಗಳಲ್ಲಿ ದೊಡ್ಡ ಸಂಬಳದ ನೌಕರಿಗಳು ಕಡಿಮೆಯಾಗುತ್ತಿವೆ. ಶೋಷಣೆ ಕೂಡ ಇದೆ. ಶ್ರೀಮಂತರಾದವರಿಗೆ ದೇಶದಲ್ಲಿ ಬೇರೆಯೇ ಒಂದು ವ್ಯವಸ್ಥೆ ಇದೆ. ಹಾಗಾಗಿ ನಮ್ಮ ಸಾಂವಿಧಾನಿಕ, ರಾಜಕೀಯ, ಆಡಳಿತ, ನ್ಯಾಯಾಂಗ ವ್ಯವಸ್ಥೆಯಲ್ಲಿ ಆಳವಾದ ದೋಷಗಳಿವೆ. ಈ ದೋಷಗಳನ್ನು ಸರಿಪಡಿಸಲು ಅಧಿಕಾರದಲ್ಲಿರುವವರಿಗೆ ಆಸಕ್ತಿ ಇಲ್ಲ. ಇವೆಲ್ಲವನ್ನೂ ಕಂಡಿರುವ ಜೆನ್ ಝೀ ಮತ್ತೆ ಕುದಿಯುತ್ತಿದೆ. ಹತ್ತು ವರ್ಷಗಳ ಹಿಂದೆ ಮೋದಿಯವರನ್ನು ಜೆನ್ ಝೀ ಭಾರಿ ಪ್ರಮಾಣದಲ್ಲಿ ಬೆಂಬಲಿಸಿತ್ತು. ಏಕೆಂದರೆ ದೇಶದ ಸಮಸ್ಯೆಗಳಿಗೆ ಉತ್ತರ ಕಂಡು ಹಿಡಿಯುವ ಶಕ್ತಿ ಮೋದಿಯವರಿಗಿದೆ ಎನ್ನುವ ನಂಬಿಕೆ ಅದಕ್ಕಿತ್ತು.

ಇಂದಿಗೂ ಆ ನಂಬಿಕೆ ಪೂರ್ತಿಯಾಗಿ ಹೋಗಿಯೇನೂ ಇಲ್ಲ. ಕಾರಣ ಸ್ಪಷ್ಟವಿದೆ. ಏನೆಂದರೆ ಮೋದಿ ದೇಶದಲ್ಲಿ ಜವಾಬ್ದಾರಿಯುತ ರಾಜಕೀಯದ ಒಂದು ಹೊಸ ಪರ್ವವನ್ನು ಹುಟ್ಟುಹಾಕಿದರು. ಹಾಗಾಗಿಯೇ ಕಳೆದ ಹತ್ತು ವರ್ಷಗಳಲ್ಲಿ ಯುವ ಚಳುವಳಿಗಳು ಹುಟ್ಟಿಕೊಳ್ಳಲಿಲ್ಲ. ಆದರೆ ಈಗ ಸಾವಕಾಶವಾಗಿ ಭಾರತೀಯ ಜನತಾ ಪಕ್ಷದ ಕುರಿತು ಕೂಡ ಜೆನ್ ಝೀಗೆ ಅನುಮಾನ, ಅಸಮಾಧಾನ ಉಂಟಾದಂತಿದೆ. ಹಾಗಾಗಿ ಅಪಸ್ವರಗಳು ಮತ್ತೆ ಆರಂಭವಾಗಿವೆ. ಈ ಎಲ್ಲ ಹಿನ್ನೆಲೆಯಲ್ಲಿ ಜೆನ್ ಝೀಯನ್ನು ಸಂಭಾಳಿಸಲು ಏನು ಮಾಡಬೇಕು ಎನ್ನುವುದು ಸ್ಪಷ್ಟವಿದೆ. ಈಗ ಯಾವ ಪಕ್ಷ ಜವಾಬ್ದಾರಿಯುತ ರಾಜಕೀಯ ಕೃತಿಯಲ್ಲಿ ತೊಡಗುತ್ತದೆಯೋ ಅದನ್ನು ಜೆನ್ ಝೀ ಮೆಚ್ಚಿಕೊಳ್ಳುತ್ತದೆ.

ಮಾತುಗಳನ್ನಲ್ಲ. ಕೃತಿಗಳನ್ನು. ಹಾಗಾಗಿ ಬದುಕಲಿಚ್ಛಿಸುವ ರಾಜಕೀಯ ಪಕ್ಷಗಳು ಗಟ್ಟಿಯಾದ ಬಿಗುವಾದ, ಜವಾಬ್ದಾರಿಯುತವಾದ ರಾಜಕೀಯದಲ್ಲಿ, ಆಡಳಿತದಲ್ಲಿ ತೊಡಗಬೇಕು. ಅನವಶ್ಯಕವಾಗಿರುವ ಕಾನೂನುಗಳನ್ನು ರದ್ದು ಪಡಿಸಬೇಕು. ಇರುವ ಕಾನೂನುಗಳನ್ನು ಬಿಗಿಯಾಗಿಡಬೇಕು. ಜನರಿಗೆ ದಿನ ದಿನದ ಬದುಕು ಸಲೀಸಾಗುವಂತಹ ಅವಶ್ಯಕತೆಗಳು ಕೃಷಿಗೆ, ಉದ್ಯಮಕ್ಕೆ ನೀರು, ವಿದ್ಯುತ್, ರಸ್ತೆ, ಶಾಲೆಗಳು, ಸರಕಾರಿ ಕಚೇರಿಗಳು, ಕಾನೂನು ಸುವ್ಯವಸ್ಥೆ, ಸ್ವಚ್ಛತೆ, ಇಂಥವನ್ನು ಸುಸ್ಥಿತಿಯಲ್ಲಿಡಬೇಕು.

ಸರಕಾರ ಎಲ್ಲದಲ್ಲಿಯೂ ಕೈ ಹಾಕುವುದನ್ನು ಬಿಡಬೇಕು. ಪ್ರತಿ ದಿನ ಕಚೇರಿಗಳಿಗೆ ಒಂದು ಸಣ್ಣ ಕೆಲಸಕ್ಕಾಗಿ ಅಡ್ಡಾಡುವುದನ್ನು ಕಡಿಮೆ ಮಾಡಬೇಕು. ಅಲ್ಲಿನ ನಿರಂತರ ಭ್ರಷ್ಟಾಚಾರವನ್ನು ಕಡಿಮೆ ಮಾಡಬೇಕು. ಇಷ್ಟನ್ನು ಗಟ್ಟಿಯಾಗಿ ನಿರ್ವಹಿಸಿದರೆ ಉದ್ಯೋಗಗಳೂ ಹುಟ್ಟಿಕೊಳ್ಳುತ್ತವೆ. ಒಟ್ಟಾರೆ ದಿನನಿತ್ಯದ ಬದುಕಿನ ಉತ್ತಮ ಗುಣಮಟ್ಟದ ನಿರ್ವಹಣೆಯಲ್ಲಿ ಜವಾಬ್ದಾರಿಯುತವಾಗಿ ಸರಕಾರ ತೊಡಗಬೇಕು. ಗಮನಿಸಬೇಕು.

1983ರಲ್ಲಿ ಕರ್ನಾಟಕದ ರಾಮಕೃಷ್ಣ ಹೆಗಡೆ ಕಾಲದಿಂದಲೂ ದೇಶದ ರಾಜಕೀಯದಲ್ಲಿ ಒಂದು ಸೂಕ್ಷ್ಮವಾದ ಎಳೆ ಬಂದಿದೆ. ಜನಪರ ರಾಜಕೀಯ ಮಾಡಿದವರು ಗೆದ್ದಿದ್ದಾರೆ. ನಂತರ ದೆಹಲಿಯಲ್ಲಿ ಆಪ್ ಎರಡು ಅವಧಿಗಳಿಗೆ ಗೆದ್ದಿತು. ಅಂದರೆ ಯಾವ ಪಕ್ಷ ಜನ ಪರವಾಗಿ ಕೆಲಸ ಮಾಡುತ್ತದೆ ಅದನ್ನು ಜೆನ್ ಝೀ ಮೆಚ್ಚಿಕೊಳ್ಳುತ್ತದೆ.

ಇದು ರಾಜಕೀಯದ ದೃಷ್ಟಿಯಿಂದ ಜೆನ್ ಝೀ ವಿಪರೀತಕ್ಕೆ ಹೋಗದಂತೆ ಮಾಡಲು ಏನು ಮಾಡಬಹುದು ಎನ್ನುವುದು. ಪಕ್ಷಗಳು ಜವಾಬ್ದಾರಿಯುತ ರಾಜಕೀಯದಲ್ಲಿ ತೊಡಗಬೇಕು. ಇಲ್ಲವಾದರೆ ಜೆನ್ ಝೀ ಸುಮ್ಮನಿರುವುದಿಲ್ಲ. ಎಚ್ಚರವಿರಲಿ ಎಂಬ ಗೋಡೆ ಬರಹವನ್ನು ಅದು ತೂಗುಹಾಕಿಯೇ ಬಿಟ್ಟಿದೆ. ಯಾವ ಪಕ್ಷಗಳು ಬೇಜವಾಬ್ದಾರಿಯಿಂದ ವರ್ತಿಸುತ್ತವೆಯೋ ಅವು ಇತಿಹಾಸದ ಪುಟ ಸೇರಲಿವೆ. ಜಾತಿ, ಮತ, ಪುಷ್ಟೀಕರಣದ ರಾಜಕೀಯ ಮುಂದೆ ನಡೆಯುವುದಿಲ್ಲ. ಸಂಪೂರ್ಣವಾಗಿ ಹೊಸ ಪಕ್ಷಗಳು ಅಧಿಕಾರಕ್ಕೆ ಬಂದು ಬಿಡಬಹುದು.




ತಮಿಳುನಾಡಿನಲ್ಲಿ ಆದಂತೆ. ಟಿ.ವಿ.ಕೆ ಗೆಲುವಿನಲ್ಲಿ ಜೆನ್ ಝೀಯ ದೊಡ್ಡ ಪಾತ್ರವಿದೆ. ಇನ್ನೊಂದು ಪ್ರಶ್ನೆ ಈಗ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ನಾವು ಏನು ಮಾಡಬೇಕು ಎನ್ನುವುದು. ಗಮನಿಸ ಬೇಕು. ನಮ್ಮ ಸಮಾಜ ಸ್ಥೂಲವಾಗಿ ಭಾರತೀಯ ಸಂಸ್ಕೃತಿಯ ಸೊಗಡನ್ನು, ನೆನಪನ್ನು ಸ್ಥೂಲವಾಗಿ ಕಳೆದುಕೊಂಡು ಕುಳಿತಿದೆ. ಮನುವಾದದ ಮೇಲೆ ದಾಳಿ ನಡೆಸುವ ನಮ್ಮ ಅತಿ ಉತ್ಸುಕತೆಯಲ್ಲಿ ನಾವು ಒಂದು ಚರಿತ್ರೆಯ, ಸಂಸ್ಕೃತಿಯ ನೆನಪನ್ನು ಕಳೆದುಕೊಂಡು ಕುಳಿತಿದ್ದೇವೆ.




ಗಾಂಧಿಯನ್ನು ಕೂಡ ಗೇಲಿ ಮಾಡಿಬಿಟ್ಟಿದ್ದೇವೆ. ನಮ್ಮ ಇತಿಹಾಸದ ವೀರರು, ದಾರ್ಶನಿಕರು ನೆನಪಿನಿಂದ ಕಣ್ಮರೆಯಾಗಿ ಹೋಗಿದ್ದಾರೆ. ಸತ್ಯ ಹರಿಶ್ಚಂದ್ರ, ಧರ್ಮರಾಯ, ಕರ್ಣ, ರಾಮ, ಅಶೋಕ, ಬುದ್ಧ, ಮಹಾವೀರ, ಶಂಕರ, ಬಸವಣ್ಣ, ಭಕ್ತಿಪಂಥದ ಮಹಾಮಹಿಮರು, ಮಹಾನ್ ಸ್ವಾತಂತ್ರ್ಯದ ಹೋರಾಟಗಾರರು ಇವರ ನೆನಪನ್ನೆಲ್ಲ ನಾವು ಅಳಿಸಿ ಹಾಕಿದ್ದೇವೆ. ಹಾಗಾಗಿಯೇ ಸಮಾಜ ಮತ್ತು ಜೆನ್ ಝೀ ಸಾಂಸ್ಕೃತಿಕ ಮರೆವಿನಲ್ಲಿರುವುದು. ನಮ್ಮ ಸಂಸ್ಕೃತಿಯ ಮರೆತು ನೆನಪನ್ನು ಮತ್ತೆ ಸಮಾಜಕ್ಕೆ ಮರಳಿ ತಂದು ಕೊಡುವುದು ಮತ್ತು ನಮ್ಮ ಸಂಸ್ಕೃತಿಗಳ ಕುರಿತಾದ ಶ್ರೇಷ್ಠ ಕಥಾನಕಗಳನ್ನು ಮರಳಿಕಟ್ಟುವುದು ಇಂದು ಸಾಂಸ್ಕೃತಿಕವಾಗಿ ಸಮಾಜವನ್ನು, ಜೆನ್ ಝೀಯನ್ನು ಮರಳಿ ಕಟ್ಟುವ ದಾರಿ. ಎಂಭತ್ತರ ದಶಕದಲ್ಲಿ ಟಿವಿಯಲ್ಲಿ ಬಂದ ರಾಮಾಯಣ, ಮಹಾಭಾರತಗಳು ಮಾಡಿದ್ದು ಈ ರೀತಿಯ ಸಾಂಸ್ಕೃತಿಕ ನೆನಪನ್ನು ಮರಳಿ ಹುಟ್ಟು ಹಾಕಿ ಸಮಾಜವನ್ನು ಮರುಚೈತನ್ಯಗೊಳಿಸಿದ್ದು.

ಅದು ಒಂದು ಹೊಸ ರಾಜಕೀಯ ಚರಿತ್ರೆಯ ಆರಂಭಕ್ಕೆ ಕಾರಣವಾಯಿತು. ಈಗ ನಾವು ಮತ್ತೆ ಮಾಡಬೇಕಿರುವುದು ಅದೇ. ಅಂದರೆ ಮತ್ತೆ ವಿಸ್ಮೃತಿಯಲ್ಲಿರುವ ನಮ್ಮ ಸಂಸ್ಕೃತಿಯ ಶ್ರೇಷ್ಠತೆಯನ್ನು ಸಾರುವ ಸಾಂಸ್ಕತಿಕ ಚಳುವಳಿಗಳನ್ನು ಪುನರುಜ್ಜೀವನಗೊಳಿಸಬೇಕು. ಇತಿಹಾಸದ ಕಥಾನಕಗಳನ್ನು ಮರಳಿ ಸೃಷ್ಟಿಗೊಳಿಸುವುದರ ಮೂಲಕ ಮತ್ತೊಂದು ಸಾಂಸ್ಕೃತಿಕ ಪುನರುತ್ಥಾನವನ್ನು ಸೃಷ್ಟಿಸಲು ನಾವು ಪ್ರಯತ್ನಿಸಬೇಕು. ದೇಶದ ಸಾಂಸ್ಕೃತಿಕ ಚಿಂತನೆಯಿಂದ ಎಡ ಕದ್ದುಕೊಂಡು ಹೋಗಿರುವ ಬುದ್ಧ, ಬಸವ, ಅಂಬೇಡ್ಕರ್ ಅವರನ್ನು ಭಾರತೀಯ ಸಾಂಸ್ಕೃತಿಕ ಚಿಂತನೆಯ ಭಾಗವಾಗಿಸಬೇಕು.

ನಮ್ಮ ಹಬ್ಬ ಹರಿದಿನಗಳ ಆಚರಣೆ ಜೆನ್ ಝೀಯನ್ನು ಒಳಗೊಳ್ಳಬೇಕು. ಇನ್ನು ಕುಟುಂಬಗಳು ಏನು ಮಾಡಬೇಕು ಎಂಬ ಪ್ರಶ್ನೆ ಇದೆ. ಒಂದೇ ಮಾತಿನ ಉತ್ತರ. ಮಕ್ಕಳು ಕಾಟ ಕೊಡದಿರಲಿ ಎಂದು ಯೋಚಿಸಿ, ತಂದೆ ತಾಯಿ ಕಣ್ಣು ಮುಚ್ಚಿ ಭಾರಿ ಹಣವನ್ನು ಮಕ್ಕಳ ಕೈಯಲ್ಲಿ ಇಡುತ್ತಿರುವಂತಿದೆ. ಈ ಕುರಿತು ತಂದೆ ತಾಯಿ ಯೋಚಿಸಬೇಕು. ಮುಖ್ಯವಾಗಿ ಮಕ್ಕಳನ್ನು ಸಂಸ್ಕೃತಿಯ ಭಾಗವಾಗಿಸಲು ಪ್ರಯತ್ನಿಸಬೇಕು.

**- ಪ್ರೊ.ಆರ್.ಜಿ.**ಹೆಗಡೆ

---

> ಗಡಿಯಾರವೆಂದರೆ ಕೇವಲ ಸಮಯ ತೋರಿಸುವ ಸಾಧನವಲ್ಲ. ಕೆಲವರಿಗೆ ಅದು ಫ್ಯಾಷನ್; ಕೆಲವರಿಗೆ ಅದು ಸ್ಥಾನಮಾನ; ಮತ್ತೆ ಕೆಲವರಿಗೆ ಅದು ನೆನಪು. ಆದರೆ ಭಾರತದ ಹಲವು ತಲೆಮಾರುಗಳ ಪಾಲಿಗೆ ಗಡಿಯಾರವೆಂದರೆ ಒಂದು ಭಾವನೆ. ಆ ಭಾವನೆಗೆ ಹೆಸರು ಎಚ್ ಎಂಟಿ. ಇಂದು ಮೊಬೈಲ್ ಫೋನ್‌ನ ಸಮಯ ನೋಡಬಹುದಾದ ಕಾಲ. ಕೈಯಲ್ಲಿರುವ ಸ್ಮಾರ್ಟ್ ಫೋನ್ ಕ್ಷಣಕ್ಷಣದ ಮಾಹಿತಿಯನ್ನು ನೀಡುತ್ತದೆ.

# ಮರೆಯಾಗಿದ್ದ ಎಚ್‌ಎಂಟಿ ವಾಚ್ ಗಳಿಗೆ ಮತ್ತೆ ಬರಲಿದೆಯೇ ರಾಜಕಳೆ?




ಕಾಲಚಕ್ರ ಅಂಕಣ ಓದುತ್ತಿದ್ದಾಗ ಒಂದು ವಿಶೇಷ ಸಂಗತಿ ನನ್ನ ಗಮನ ಸೆಳೆಯಿತು. ಯುವ ಜನತೆ ಬೆಂಗಳೂರಿನಲ್ಲಿ ಎಚ್‌ಎಂಟಿ ಸ್ಟೋರ್ ಮುಂದೆ ಕಿಲೋಮೀಟರ್‌ಗಟ್ಟಲೆ ಕ್ಯೂ ನಿಂತು ಎಚ್ ಎಂಟಿ ಕೈ ಗಡಿಯಾರ ಕೊಳ್ಳುತ್ತಿರುವುದು ಕಂಡುಬಂತು. ಇದು ನಿಜಕ್ಕೂ ಅಚ್ಚರಿಯ ಸಂಗತಿ. ಈ ಆಧುನಿಕ ಯುಗದಲ್ಲಿ, ಅದರಲ್ಲೂ ಯುವ ಜನತೆ ಎಚ್‌ಎಂಟಿ ಕಡೆಗೆ ಆಕರ್ಷಿತರಾಗುತ್ತಿರುವುದು ಸಂತಸದ ಸಂಗತಿ. ಒಂದು ಕಾಲದಲ್ಲಿ ಭಾರತೀಯರ ಪಾಲಿಗೆ ಕೈಗಡಿಯಾರ ಎಂದರೆ ಎಚ್ ಎಂಟಿ ಎನ್ನುವಷ್ಟರ ಮಟ್ಟಿಗೆ ಜನಪ್ರಿಯವಾಗಿತ್ತು. ಕಾಲ ಬದಲಾಯಿತು, ಡಿಜಿಟಲ್ ತಂತ್ರಜ್ಞಾನ ಬಂತು, ಸ್ಮಾರ್ಟ್ ವಾಚ್‌ಗಳು ಮಾರುಕಟ್ಟೆಯನ್ನು ಆವರಿಸಿಕೊಂಡವು. ಆದರೂ ಎಚ್‌ಎಂಟಿ ಮಾತ್ರ ಇತಿಹಾಸದ ಪುಟಗಳಲ್ಲಿ ಮರೆಯಾಗಲಿಲ್ಲ. ಈಗ ಹೊಸ ತಲೆಮಾರಿನ ಆಸಕ್ತಿ, ವಾಚ್ ಸಂಗ್ರಹದ ಅಭಿಮಾನ ಮತ್ತು ಹಳೆಯ ನೆನಪುಗಳ ಕಾರಣದಿಂದ ಎಚ್‌ಎಂಟಿ ಮತ್ತೆ ತನ್ನದೇ ಆದ ಪ್ರಖ್ಯಾತಿಯನ್ನು ಗಳಿಸುತ್ತಿದೆ.

ಗಡಿಯಾರವೆಂದರೆ ಕೇವಲ ಸಮಯ ತೋರಿಸುವ ಸಾಧನವಲ್ಲ. ಕೆಲವರಿಗೆ ಅದು ಫ್ಯಾಷನ್; ಕೆಲವರಿಗೆ ಅದು ಸ್ಥಾನಮಾನ; ಮತ್ತೆ ಕೆಲವರಿಗೆ ಅದು ನೆನಪು. ಆದರೆ ಭಾರತದ ಹಲವು ತಲೆಮಾರುಗಳ ಪಾಲಿಗೆ ಗಡಿಯಾರವೆಂದರೆ ಒಂದು ಭಾವನೆ. ಆ ಭಾವನೆಗೆ ಹೆಸರು ಎಚ್ ಎಂಟಿ. ಇಂದು ಮೊಬೈಲ್ ಫೋನ್‌ನ ಸಮಯ ನೋಡಬಹುದಾದ ಕಾಲ. ಕೈಯಲ್ಲಿರುವ ಸ್ಮಾರ್ಟ್ ಫೋನ್ ಕ್ಷಣಕ್ಷಣದ ಮಾಹಿತಿಯನ್ನು ನೀಡುತ್ತದೆ.

ಸ್ಮಾರ್ಟ್‌ವಾಚ್‌ಗಳು ಹೃದಯ ಬಡಿತದಿಂದ ಹಿಡಿದು ವ್ಯಾಯಾಮದವರೆಗೆ ಅನೇಕ ಮಾಹಿತಿಯನ್ನು ನೀಡುತ್ತವೆ. ಇಂತಹ ತಂತ್ರಜ್ಞಾನ ಯುಗದಲ್ಲೂ ಒಂದು ಸಾಮಾನ್ಯವಾದ, ಸಾಂಪ್ರದಾಯಿಕ ಕೈಗಡಿಯಾರಕ್ಕಾಗಿ ಜನರು ಹುಡುಕಾಟ ನಡೆಸುತ್ತಿರುವುದು ಆಶ್ಚರ್ಯ ಮೂಡಿಸುತ್ತದೆ. ಆ ಹುಡುಕಾಟದಲ್ಲಿ ಎಚ್‌ಎಂಟಿಗೆ ವಿಶೇಷ ಸ್ಥಾನ ಸಿಕ್ಕಿದೆ. ಸ್ವಾತಂತ್ರ್ಯಾನಂತರ ಭಾರತ ಸ್ವಾವಲಂಬನೆಯತ್ತ ಹೆಜ್ಜೆ ಹಾಕುತ್ತಿದ್ದ ಸಂದರ್ಭದಲ್ಲಿ ದೇಶೀಯ ಕೈಗಾರಿಕೆಗಳ ನಿರ್ಮಾಣಕ್ಕೆ ಹೆಚ್ಚಿನ ಮಹತ್ವ ನೀಡಲಾಯಿತು.

ಬೆಂಗಳೂರಿನಲ್ಲಿ ಎಚ್ ಎಂಟಿಯ ಮೊದಲ ಯಂತ್ರೋಪಕರಣ ಕಾರ್ಖಾನೆ 1953ರಲ್ಲಿ ಸ್ಥಾಪನೆಯಾಯಿತು. ನಂತರ ದೇಶದಲ್ಲಿ ಕೈಗಡಿಯಾರ ತಯಾರಿಸುವ ಅಗತ್ಯ ಮೂಡಿದಾಗ, 1961ರಲ್ಲಿ ಬೆಂಗಳೂರಿನಲ್ಲಿ ಎಚ್‌ಎಂಟಿ ವಾಚ್ ಘಟಕ ಸ್ಥಾಪನೆಯಾಯಿತು. ಇದಕ್ಕೆ ಜಪಾನ್‌ನ ಸಿಟಿಜನ್ ವಾಚ್ ಕಂಪನಿ ಸಹಕಾರ ನೀಡಿತ್ತು.

ಅದೇ ವರ್ಷ ಎಚ್‌ಎಂಟಿ ತನ್ನ ಮೊದಲ ಕೈಗಡಿಯಾರಗಳನ್ನು ಬಿಡುಗಡೆ ಮಾಡಿತು. ಆ ಮೊದಲ ಹೆಜ್ಜೆಯ ನಂತರ ಭಾರತೀಯ ಗಡಿಯಾರ ಉದ್ಯಮದಲ್ಲಿ ಎಚ್‌ಎಂಟಿ ತನ್ನದೇ ಆದ ಅಧ್ಯಾಯ ಬರೆಯಿತು. ಎಚ್‌ಎಂಟಿ ಕೇವಲ ಗಡಿಯಾರಗಳನ್ನು ಜೋಡಿಸುವ ಸಂಸ್ಥೆಯಾಗಿರಲಿಲ್ಲ. ಕಾಲ ಕ್ರಮೇಣ ಗಡಿಯಾರದ ವಿವಿಧ ಭಾಗಗಳನ್ನು ದೇಶದ ತಯಾರಿಸುವ ಸಾಮರ್ಥ್ಯವನ್ನು ಬೆಳೆಸಿ ಕೊಂಡಿತು. 1970ರ ದಶಕದಲ್ಲಿ ಬೆಂಗಳೂರಿನಲ್ಲಿ ಉತ್ಪಾದನಾ ಸಾಮರ್ಥ್ಯ ವಿಸ್ತರಿಸಲಾಯಿತು.

ಎಚ್‌ಎಂಟಿ ತನ್ನ ಯಾಂತ್ರಿಕ ಗಡಿಯಾರಗಳ ಪ್ರಮುಖ ಘಟಕಗಳನ್ನೂ ದೇಶೀಯವಾಗಿ ತಯಾರಿಸುವ ಮಟ್ಟಕ್ಕೆ ಬೆಳೆದಿತ್ತು. ಇದರಿಂದ ಎಚ್‌ಎಂಟಿ ಎಂಬ ಹೆಸರು ಭಾರತೀಯ ಕೈಗಾರಿಕಾ ಸ್ವಾವಲಂಬನೆಯ ಸಂಕೇತವಾಗಿಯೂ ಗುರುತಿಸಿಕೊಂಡಿತು.

### ಮನೆಯ ಹೆಮ್ಮೆಯ ವಾಚ್

ಒಂದು ಕಾಲದಲ್ಲಿ ಮದುವೆ, ಹುಟ್ಟುಹಬ್ಬ, ನಿವೃತ್ತಿ ಅಥವಾ ವಿಶೇಷ ಸಂದರ್ಭಗಳಲ್ಲಿ ಎಚ್‌ಎಂಟಿ ವಾಚ್ ಉಡುಗೊರೆಯಾಗಿ ನೀಡುವುದು ಸಾಮಾನ್ಯವಾಗಿತ್ತು. ತಂದೆ ಮಗನಿಗೆ, ಅಣ್ಣ ತಮ್ಮನಿಗೆ, ಸ್ನೇಹಿತ ಸ್ನೇಹಿತನಿಗೆ ಎಚ್‌ಎಂಟಿ ವಾಚ್ ನೀಡುತ್ತಿದ್ದ ಸಂದರ್ಭಗಳು ಇಂದಿಗೂ ಅನೇಕರ ನೆನಪಿನಲ್ಲಿವೆ. ಆ ಕಾಲದಲ್ಲಿ ಕೈಗಡಿಯಾರ ಒಂದು ದುಬಾರಿ ವಸ್ತುವಾಗಿದ್ದಷ್ಟೇ ಅಲ್ಲ, ವ್ಯಕ್ತಿಯ ವೈಯಕ್ತಿಕ ಶೈಲಿಯ ಸಂಕೇತವೂ ಆಗಿತ್ತು. ಎಚ್ ಎಂಟಿಯ ಸರಳ ವಿನ್ಯಾಸವೇ ಅದರ ದೊಡ್ಡ ಶಕ್ತಿಯಾಗಿತ್ತು. ಅತಿಯಾದ ಅಲಂಕಾರವಿಲ್ಲ. ದೊಡ್ಡ ದೊಡ್ಡ ಲೋಗೋಗಳಿಲ್ಲ.

## ವಿಂಟೇಜ್ ಫ್ಯಾಷನ್...

- ಎಚ್ ಎಂಟಿಯನ್ನು ತಮ್ಮ ತಂದೆ-ತಾತಂದಿರ ಕಾಲದ ವಾಚ್ ಎಂದು ಮಾತ್ರ ನೋಡದೆ, ಅದನ್ನು ವಿಂಟೇಜ್ ಫ್ಯಾಷನ್ ಎಂದು ನೋಡುವ ಯುವಕರ ಸಂಖ್ಯೆ ಹೆಚ್ಚಾಗಿದೆ.
- ಜೀನ್ಸ್ ಮತ್ತು ಟೀ-ಶರ್ಟ್ ಜೊತೆಗೆ ಹಳೆಯ ಶೈಲಿಯ ಎಚ್‌ಎಂಟಿ; ಫಾರ್ಮಲ್ ಉಡುಪಿನೊಂದಿಗೆ ಕ್ಲಾಸಿಕ್ ಡಯಲ್; ಸರಳ ಉಡುಪಿನೊಂದಿಗೆ ಮೆಕ್ಯಾನಿಕಲ್ ವಾಚ್ ಹೀಗೆ ಎಚ್‌ಎಂಟಿ ಮತ್ತೆ ಫ್ಯಾಷನ್ ಲೋಕಕ್ಕೂ ಪ್ರವೇಶಿಸಿದೆ.
- ಇದು ಹಳೆಯ ವಸ್ತುವಿನ ಪುನರುತ್ಥಾನ ಮಾತ್ರವಲ್ಲ.
- ಹಳೆಯ ವಿನ್ಯಾಸವನ್ನು ಹೊಸ ತಲೆಮಾರು ತನ್ನದೇ ಶೈಲಿಯಲ್ಲಿ ಅಳವಡಿಸಿಕೊಳ್ಳುತ್ತಿರುವ ಪ್ರಕ್ರಿಯೆ.

ಅಗತ್ಯಕ್ಕಿಂತ ಹೆಚ್ಚಿನ ವಿನ್ಯಾಸವಿಲ್ಲ. ಸಮಯವನ್ನು ಸ್ಪಷ್ಟವಾಗಿ ತೋರಿಸುವ ಡಯಲ್, ವಿಶ್ವಾಸಾರ್ಹ ಯಾಂತ್ರಿಕ ವ್ಯವಸ್ಥೆ ಮತ್ತು ದೀರ್ಘಕಾಲ ಬಳಸಬಹುದಾದ ಗಡಿಯಾರ ಇಷ್ಟೇ. ಅದರ ಎಚ್‌ಎಂಟಿಯ ಸೌಂದರ್ಯ ಅಡಗಿತ್ತು. ಎಚ್‌ಎಂಟಿ ಹೆಸರಿನೊಂದಿಗೆ ಅನೇಕ ಮಾದರಿಗಳು ಭಾರತೀಯರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿವೆ. ಜನತಾ, ಪೈಲಟ್, ಕೊಹಿನೂರ್, ಸೋನಾ, ರವಿ ಬಹದ್ದೂರ್, ವಿಜಯ್, ಜವಾನ್ ಸೇರಿದಂತೆ ಹಲವು ಮಾದರಿಗಳು ವಿವಿಧ ಕಾಲಘಟ್ಟಗಳಲ್ಲಿ ಜನಪ್ರಿಯವಾಗಿವೆ.

ಪ್ರತಿಯೊಂದು ಮಾದರಿಗೂ ತನ್ನದೇ ಆದ ವಿನ್ಯಾಸ ಮತ್ತು ಅಭಿಮಾನಿಗಳಿದ್ದಾರೆ. ವಿಶೇಷವಾಗಿ ಜನತಾ ಎಂಬ ಹೆಸರು ಭಾರತೀಯ ಗಡಿಯಾರ ಪ್ರಿಯರಲ್ಲಿ ಒಂದು ವಿಶಿಷ್ಟ ಸ್ಥಾನ ಹೊಂದಿದೆ. ಸರಳತೆ ಮತ್ತು ಸಾಂಪ್ರದಾಯಿಕ ವಿನ್ಯಾಸದಿಂದ ಅದು ಹಲವು ವರ್ಷಗಳ ನಂತರವೂ ಚರ್ಚೆಯಲ್ಲಿದೆ. ಕೊಹಿನೂರ್ ಮತ್ತೊಂದು ಪ್ರಸಿದ್ಧ ಹೆಸರು. ಎಚ್‌ಎಂಟಿ ಅಧಿಕೃತ ಪಟ್ಟಿಯಲ್ಲಿ ಕೊಹಿನೂರ್ ಕ್ವಾಟ್ ಮತ್ತು ಕೊಹಿನೂರ್ ಆಟೋಮ್ಯಾಟಿಕ್ ಸೇರಿದಂತೆ ವಿವಿಧ ಮಾದರಿಗಳು ಕಾಣಿಸುತ್ತವೆ.

### ಏಕೆ ಮತ್ತೆ ಎಚ್‌ಎಂಟಿ?

ಇದು ಕೇವಲ ಹಳೆಯ ವಸ್ತುವಿನ ಮೇಲಿನ ಮೋಹವಲ್ಲ. ಇದರ ಹಿಂದೆ ಹಲವು ಕಾರಣಗಳಿವೆ. ಮೊದಲನೆಯದು ನಾಸ್ತಾಲ್ಜಿಯಾ. ತಂದೆಯ ಕೈಯಲ್ಲಿದ್ದ ವಾಚ್, ಅಜ್ಜನ ಹಳೆಯ ಪೆಟ್ಟಿಗೆಯಲ್ಲಿ ಸುರಕ್ಷಿತವಾಗಿ ಇಟ್ಟಿದ್ದ ಎಚ್‌ಎಂಟಿ, ಬಾಲ್ಯದಲ್ಲಿ ಮನೆಯಲ್ಲಿದ್ದ ಗಡಿಯಾರ ಇಂತಹ ನೆನಪುಗಳು ಎಚ್ ಎಂಟಿಯೊಂದಿಗೆ ಬೆಸೆದುಕೊಂಡಿವೆ.

ಇಂದಿನ ಬಹುತೇಕ ವಾಚ್‌ಗಳು ಒಂದಕ್ಕೊಂದು ಹೋಲುವಂತಿರುವ ಸಂದರ್ಭದಲ್ಲಿ ಹಳೆಯ ಎಚ್‌ಎಂಟಿ ಮಾದರಿಗಳಲ್ಲಿ ಕಾಣುವ ವಿನ್ಯಾಸ ಪ್ರತ್ಯೇಕವಾಗಿ ಗಮನ ಸೆಳೆಯುತ್ತದೆ.

ಮೊಬೈಲ್ ಮತ್ತು ಸ್ಮಾರ್ಟ್‌ವಾಚ್‌ಗಳ ಯುಗದಲ್ಲೂ ಯಾಂತ್ರಿಕ ಗಡಿಯಾರದ ಒಳಗೆ ಕೆಲಸ ಮಾಡುವ ಸಣ್ಣ ಸಣ್ಣ ಚಕ್ರಗಳು, ಸ್ಪ್ರಿಂಗ್‌ಗಳು ಮತ್ತು ಗಿಯರ್‌ಗಳನ್ನು ನೋಡುವ ಆಸಕ್ತಿ ಹೆಚ್ಚಾಗಿದೆ. ಸಮಯ ತೋರಿಸುವ ಸಾಧನದ ಹಿಂದೆ ಇರುವ ಯಾಂತ್ರಿಕ ಕೌಶಲ್ಯವೇ ಕೆಲವರಿಗೆ ಆಕರ್ಷಣೆ. ವಿದೇಶಿ ಬ್ರ್ಯಾಂಡ್‌ಗಳ ನಡುವೆ ಭಾರತೀಯ ಮೂಲದ ಹಳೆಯ ಬ್ರ್ಯಾಂಡ್ ಮತ್ತೆ ಜನಪ್ರಿಯವಾಗುತ್ತಿರುವುದು ಅನೇಕ ವಾಚ್ ಪ್ರಿಯರಿಗೆ ವಿಶೇಷ ಸಂತೋಷ ನೀಡುತ್ತಿದೆ. ಯುವ ಜನರ ಕೈಗೆ ಎಚ್‌ಎಂಟಿ ಒಂದು ಕುತೂಹಲಕಾರಿ ಬದಲಾವಣೆ ಎಂದರೆ ಎಚ್‌ಎಂಟಿಯ ಹೊಸ ಅಭಿಮಾನಿಗಳಲ್ಲಿ ಯುವಜನರೂ ಇದ್ದಾರೆ.

ಎಚ್ ಎಂಟಿಯನ್ನು ತಮ್ಮ ತಂದೆ-ತಾತಂದಿರ ಕಾಲದ ವಾಚ್ ಎಂದು ಮಾತ್ರ ನೋಡದೆ, ಅದನ್ನು ವಿಂಟೇಜ್ ಫ್ಯಾಷನ್ ಎಂದು ನೋಡುವ ಯುವಕರ ಸಂಖ್ಯೆ ಹೆಚ್ಚಾಗಿದೆ. ಜೀನ್ಸ್ ಮತ್ತು ಟೀ-ಶರ್ಟ್ ಜೊತೆಗೆ ಹಳೆಯ ಶೈಲಿಯ ಎಚ್‌ಎಂಟಿ; ಫಾರ್ಮಲ್ ಉಡುಪಿನೊಂದಿಗೆ ಕ್ಲಾಸಿಕ್ ಡಯಲ್; ಸರಳ ಉಡುಪಿನೊಂದಿಗೆ ಮೆಕ್ಯಾನಿಕಲ್ ವಾಚ್ ಹೀಗೆ ಎಚ್‌ಎಂಟಿ ಮತ್ತೆ ಫ್ಯಾಷನ್ ಲೋಕಕ್ಕೂ ಪ್ರವೇಶಿಸಿದೆ.

ಇದು ಹಳೆಯ ವಸ್ತುವಿನ ಪುನರುತ್ಥಾನ ಮಾತ್ರವಲ್ಲ. ಹಳೆಯ ವಿನ್ಯಾಸವನ್ನು ಹೊಸ ತಲೆಮಾರು ತನ್ನದೇ ಶೈಲಿಯಲ್ಲಿ ಅಳವಡಿಸಿಕೊಳ್ಳುತ್ತಿರುವ ಪ್ರಕ್ರಿಯೆ. ಇಂದು ಸ್ಮಾರ್ಟ್‌ವಾಚ್ ಗಳು ಸಮಯದ ಜೊತೆಗೆ ಹೃದಯ ಬಡಿತ, ಹೆಜ್ಜೆಗಳ ಸಂಖ್ಯೆ, ನಿದ್ರೆ, ಸಂದೇಶಗಳು, ಕರೆಗಳು ಸೇರಿದಂತೆ ಹಲವು ಮಾಹಿತಿಗಳನ್ನು ನೀಡುತ್ತವೆ. ಆದರೆ ಎಚ್ ಎಂಟಿ ಇವುಗಳೊಂದಿಗೆ ಸ್ಪರ್ಧಿಸುವುದಿಲ್ಲ. ಎಚ್‌ಎಂಟಿ ಹೇಳುವುದು ಒಂದೇ, ಸಮಯವನ್ನು ತಿಳಿದುಕೊಳ್ಳಲು ಒಂದು ಗಡಿಯಾರ ಸಾಕು. ಈ ಸರಳತೆಯೇ ಕೆಲವರಿಗೆ ಆಕರ್ಷಣೆಯಾಗಿದೆ. ಸ್ಮಾರ್ಟ್‌ವಾಚ್‌ನಲ್ಲಿ ಬ್ಯಾಟರಿ ಚಾರ್ಜ್ ಮಾಡಬೇಕಾಗಬಹುದು. ತಂತ್ರಜ್ಞಾನ ಬದಲಾಗಬಹುದು.

ಸಾಫ್ಟ್‌ವೇರ್ ಹಳೆಯದಾಗಬಹುದು. ಆದರೆ ಒಂದು ಉತ್ತಮ ಯಾಂತ್ರಿಕ ವಾಚ್ ತಲೆಮಾರುಗಳಿಂದ ತಲೆಮಾರಿಗೆ ಸಾಗುವ ವಸ್ತುವಾಗಬಹುದು. ಅದಕ್ಕಾಗಿಯೇ ಎಚ್ ಎಂಟಿಯನ್ನು ಕೆಲವರು ಕೇವಲ ವಾಚ್ ಎಂದು ನೋಡುವುದಿಲ್ಲ; ಅದನ್ನು ಪರಂಪರೆ ಎಂದು ನೋಡುತ್ತಾರೆ. ಬೆಂಗಳೂರಿನ ನಂಟು ಎಚ್‌ಎಂಟಿಯ ಕಥೆಯಲ್ಲಿ ಬೆಂಗಳೂರಿಗೆ ವಿಶೇಷ ಸ್ಥಾನವಿದೆ. ಭಾರತದ ಸಾರ್ವಜನಿಕ ವಲಯದ ಕೈಗಾರಿಕಾ ಬೆಳವಣಿಗೆಯಲ್ಲಿ ಬೆಂಗಳೂರು ಪ್ರಮುಖ ಕೇಂದ್ರವಾಗಿ ರೂಪುಗೊಳ್ಳುತ್ತಿದ್ದ ಸಂದರ್ಭದಲ್ಲಿ ಎಚ್‌ಎಂಟಿ ಇಲ್ಲಿ ತನ್ನ ಯಂತ್ರೋಪಕರಣ ಮತ್ತು ಗಡಿಯಾರ ಉತ್ಪಾದನಾ ಚಟುವಟಿಕೆಗಳನ್ನು ವಿಸ್ತರಿಸಿತು.

ಎಚ್‌ಎಂಟಿ ವಾಚ್ ಘಟಕದ ಬೆಳವಣಿಗೆಯೊಂದಿಗೆ ಬೆಂಗಳೂರಿನ ಕೈಗಾರಿಕಾ ಇತಿಹಾಸಕ್ಕೂ ಹೊಸ ಅಧ್ಯಾಯ ಸೇರ್ಪಡೆಯಾಯಿತು. ಹೀಗಾಗಿ ಎಚ್‌ಎಂಟಿ ಕೇವಲ ಒಂದು ಬ್ರ್ಯಾಂಡ್ ಅಲ್ಲ. ಅದು ಬೆಂಗಳೂರಿನ ಕೈಗಾರಿಕಾ ಪರಂಪರೆಯ ಒಂದು ಭಾಗವೂ ಹೌದು. ಇಂದಿನ ಎಚ್‌ಎಂಟಿ ಅಧಿಕೃತ ವೆಬ್ ಸೈಟ್‌ನಲ್ಲಿ ಪುರುಷರು ಮತ್ತು ಮಹಿಳೆಯರಿಗಾಗಿ ವಿವಿಧ ಮಾದರಿಗಳನ್ನು ಪಟ್ಟಿ ಮಾಡಲಾಗಿದೆ.

ಹೊಸದಾಗಿ ಪಟ್ಟಿ ಮಾಡಲಾದ, ವೇಗವಾಗಿ ಮಾರಾಟವಾಗುವ ಮತ್ತು ಪ್ರೀಮಿಯಂ ಮಾದರಿಗಳ ವಿಭಾಗಗಳನ್ನೂ ವೆಬ್‌ಸೈಟ್ ಹೊಂದಿದ ಎಚ್‌ಎಂಟಿ ಎಂದರೆ ನೆನಪು. ಒಬ್ಬ ವಯಸ್ಸಾದ ವ್ಯಕ್ತಿಯ ಕೈಯಲ್ಲಿರುವ ಹಳೆಯ ಎಚ್‌ಎಂಟಿ ವಾಚ್ ನೋಡಿದಾಗ ಅವರ ಬದುಕಿನ ಹಲವು ನೆನಪುಗಳು ಅದರೊಂದಿಗೆ ಜೋಡಿಸಿಕೊಂಡಿರುವುದು ಕಾಣಬಹುದು.

ಮೊದಲ ಸಂಬಳದಲ್ಲಿ ಖರೀದಿಸಿದ ವಾಚ್, ಮದುವೆಯ ಸಂದರ್ಭದಲ್ಲಿ ಬಂದ ಉಡುಗೊರೆ, ತಂದೆಯಿಂದ ಮಗನಿಗೆ ಬಂದ ನೆನಪಿನ ಕಾಣಿಕೆ, ಉದ್ಯೋಗಕ್ಕೆ ಸೇರಿದ ದಿನ ಕೈಗೆ ಕಟ್ಟಿಕೊಂಡಿದ್ದ ವಾಚ್, ವಿದೇಶಕ್ಕೆ ಹೋಗುವ ಮೊದಲು ತಂದೆ ಕೊಟ್ಟ ಗಡಿಯಾರ, ಇಂತಹ ಕಥೆಗಳನ್ನು ಯಾವುದೇ ಸ್ಮಾರ್ಟ್ ವಾಚ್‌ನ ತಾಂತ್ರಿಕ ವೈಶಿಷ್ಟ್ಯಗಳಿಂದ ಅಳೆಯಲು ಸಾಧ್ಯವಿಲ್ಲ. ಇದೇ ಎಚ್‌ಎಂಟಿ ಯ ನಿಜವಾದ ಶಕ್ತಿ. ಎಚ್‌ಎಂಟಿಯ ಪುನರುಜ್ಜೀವನದ ಕಥೆ ಭಾರತೀಯ ಬ್ರ್ಯಾಂಡ್‌ಗಳಿಗೆ ಒಂದು ಪ್ರಮುಖ ಪಾಠವನ್ನೂ ನೀಡುತ್ತದೆ.

ಬ್ರ್ಯಾಂಡ್‌ನ ಮೌಲ್ಯವು ಕೇವಲ ಜಾಹೀರಾತಿನಿಂದ ನಿರ್ಮಾಣವಾಗುವುದಿಲ್ಲ. ಗುಣಮಟ್ಟ, ವಿಶ್ವಾಸ, ನೆನಪು ಮತ್ತು ಗ್ರಾಹಕರೊಂದಿಗೆ ಬೆಳೆದ ಸಂಬಂಧವೂ ಅದನ್ನು ನಿರ್ಮಿಸುತ್ತದೆ. ಒಂದು ಬ್ರ್ಯಾಂಡ್ ಹಲವು ವರ್ಷಗಳ ಕಾಲ ಜನರ ಬದುಕಿನ ಭಾಗವಾಗಿದ್ದರೆ, ಅದರ ಮೇಲಿನ ಪ್ರೀತಿ ಸಂಪೂರ್ಣವಾಗಿ ಮಾಯವಾಗುವುದಿಲ್ಲ. ಸೂಕ್ತ ಸಂದರ್ಭದಲ್ಲಿ ಅದು ಮತ್ತೆ ಹೊರಹೊಮ್ಮಬಹುದು. ಎಚ್‌ಎಂಟಿಗೆ ಮುಂದೆ ದೊಡ್ಡ ಅವಕಾಶಗಳಿವೆ. ಆದರೆ ಈ ಹೊಸ ಆಸಕ್ತಿಯನ್ನು ದೀರ್ಘಕಾಲದ ಯಶಸ್ಸಾಗಿ ಪರಿವರ್ತಿಸಲು ಗುಣಮಟ್ಟ, ಉತ್ಪಾದನಾ ಸಾಮರ್ಥ್ಯ, ಮಾದರಿಗಳ ಲಭ್ಯತೆ, ಸೇವೆ ಮತ್ತು ಅಧಿಕೃತ ವಿತರಣಾ ವ್ಯವಸ್ಥೆಗಳಿಗೆ ಹೆಚ್ಚಿನ ಒತ್ತು ಅಗತ್ಯ.




ಎಚ್‌ಎಂಟಿಗೆ ಹಳೆಯ ಮಾದರಿಗಳ ಅಭಿಮಾನಿಗಳನ್ನು ಉಳಿಸಿಕೊಂಡು, ಹೊಸ ತಲೆಮಾರಿನ ಗ್ರಾಹಕರನ್ನು ಸೆಳೆಯುವುದು ಪ್ರಮುಖ ಸವಾಲು. ವಿಂಟೇಜ್ ವಿನ್ಯಾಸದ ಸೊಗಡನ್ನು ಉಳಿಸಿಕೊಂಡೇ ಆಧುನಿಕ ಗ್ರಾಹಕರ ನಿರೀಕ್ಷೆಗಳಿಗೆ ಹೊಂದುವ ಮಾದರಿಗಳನ್ನು ನೀಡುವುದು ಎಚ್‌ಎಂಟಿಗೆ ಹೊಸ ದಾರಿ ತೆರೆದುಕೊಡಬಹುದು. ಒಂದು ಕಾಲದಲ್ಲಿ ಎಚ್‌ಎಂಟಿ ಭಾರತದ ಕೈಗಡಿಯಾರ ಲೋಕದ ರಾಜನಂತಿತ್ತು. ನಂತರ ಮಾರುಕಟ್ಟೆಯ ಬದಲಾವಣೆ, ತಂತ್ರಜ್ಞಾನ ಮತ್ತು ಸ್ಪರ್ಧೆಯ ನಡುವೆ ಅದರ ಪ್ರಭಾವ ಕುಂದಿತು. ಆದರೆ ಎಚ್‌ಎಂಟಿಯ ಕಥೆ ಅಲ್ಲಿಗೆ ಮುಗಿಯಲಿಲ್ಲ.

ಹೀಗಾಗಿ ಎಚ್‌ಎಂಟಿಯ ಪುನರಾಗಮನವೆಂದರೆ ಕೇವಲ ಒಂದು ವಾಚ್ ಬ್ರ್ಯಾಂಡ್‌ನ ಪುನರುತ್ಥಾನವಲ್ಲ. ಅದು ಭಾರತೀಯ ಕೈಗಾರಿಕಾ ನೆನಪು, ಸರಳ ವಿನ್ಯಾಸ, ಯಾಂತ್ರಿಕ ಕೌಶಲ್ಯ ಮತ್ತು ತಲೆಮಾರುಗಳನ್ನು ಸಂಪರ್ಕಿಸುವ ಭಾವನೆಯ ಪುನರಾಗಮನ. ಮೊಬೈಲ್ ಪರದೆಯಲ್ಲಿ ಸಮಯ ಬದಲಾಗುತ್ತಲೇ ಇರಬಹುದು. ಸ್ಮಾರ್ಟ್‌ವಾಚ್‌ಗಳಲ್ಲಿ ಹೊಸ ತಂತ್ರಜ್ಞಾನಗಳು ಬರುತ್ತಲೇ ಇರಬಹುದು. ಆದರೆ ಕೈಯಲ್ಲಿ ಕಟ್ಟಿಕೊಂಡಿರುವ ಹಳೆಯ ಎಚ್‌ಎಂಟಿಯ ಸೂಜಿಗಳು ನಿಧಾನವಾಗಿ ಸುತ್ತುತ್ತಾ ಒಂದು ಸಂದೇಶವನ್ನು ನೀಡುತ್ತವೆ. ಕಾಲ ಬದಲಾಗಬಹುದು; ಆದರೆ ನಿಜವಾದ ನೆನಪುಗಳಿಗೆ ಎಂದಿಗೂ ಹಳೆಯತನ ಬರುವುದಿಲ್ಲ.

ಹೀಗಾಗಿ ಎಚ್‌ಎಂಟಿಯ ಹೊಸ ಪ್ರಖ್ಯಾತಿ ಒಂದು ಪ್ರಶ್ನೆಯನ್ನು ಮುಂದಿಡುತ್ತದೆ. ಹಳೆಯ ಬ್ರ್ಯಾಂಡ್‌ಗಳು ಸಾಯುವುದಿಲ್ಲ; ಅವು ಸರಿಯಾದ ಕಾಲಕ್ಕಾಗಿ ಕಾಯುತ್ತವೆ. ಎಚ್‌ಎಂಟಿಯ ಕಾಲ ಮತ್ತೆ ಬಂದಿದೆಯೇ? ವಾಚ್ ಪ್ರಿಯರ ಉತ್ತರ ಬಹುಶಃ ಹೌದು, ಸಮಯ ಮತ್ತೆ ಎಚ್‌ಎಂಟಿಯ ಪರವಾಗಿ ನಡೆಯುತ್ತಿದೆ.

**- ರಾ.ರಾಮಾರಾಧ್ಯ,** ಮೈಸೂರು

## ಪಾಲಿಕೆ ಕಚೇರಿ ಮೇಲೆ ಲೋಕಾಯುಕ್ತ ದಿಢೀರ್ ದಾಳಿ

» ಮೊದಲನೇ ಪುಟದಿಂದ

ಶೋಧನಾ ಆದೇಶದೊಂದಿಗೆ ಪರಿಶೀಲನೆ

ಲೋಕಾಯುಕ್ತ ಅಧಿಕಾರಿಗಳು ಶೋಧನಾ ಆದೇಶದೊಂದಿಗೆ ಮಹಾನಗರ ಪಾಲಿಕೆ ಕಚೇರಿಗೆ ಆಗಮಿಸಿ ಪರಿಶೀಲನೆ ನಡೆಸಿದ್ದಾರೆ. ಇದರಿಂದ ಪಾಲಿಕೆ ಆವರಣದಲ್ಲಿ ಕೆಲಕಾಲ ಕುತೂಹಲದ ವಾತಾವರಣ ನಿರ್ಮಾಣವಾಗಿತ್ತು. ಸಾಮಾನ್ಯ ತಪಾಸಣೆಯ ರೀತಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಅಧಿಕಾರಿಗಳು ಹಾಗು ಸಿಬ್ಬಂದಿ ವಿವಿಧ ವಿಭಾಗಗಳಿಗೆ ತೆರಳಿ ದಾಖಲೆಗಳನ್ನು ಪರಿಶೀಲಿಸಿದ್ದು, ಗಮನ ಸೆಳೆಯಿತು. ಪಾಲಿಕೆಯ ಬಹುತೇಕ ಕಚೇರಿಗಳಲ್ಲಿ ಏಕಕಾಲದಲ್ಲಿ ಪರಿಶೀಲನೆ ನಡೆದ ಹಿನ್ನೆಲೆಯಲ್ಲಿ ಸಿಬ್ಬಂದಿಯಲ್ಲೂ ಆತಂಕದ ವಾತಾವರಣ ಕಂಡುಬಂತು.

ಹಾಸನ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗೆ ನೀಡಬೇಕಾದ ಸೇವೆಗಳ ಕುರಿತು ಆಗಾಗ್ಗೆ ದೂರುಗಳು ಕೇಳಿಬರುತ್ತಿರುವ ಹಿನ್ನಲೆ ಲೋಕಾಯುಕ್ತ ಅಧಿಕಾರಿಗಳ ಭೇಟಿ ಮಹತ್ವ ಪಡೆದುಕೊಂಡಿದೆ. ವಿವಿಧ ಅನುಮತಿಗಳು, ಸಾರ್ವಜನಿಕ ಕಾಮಗಾರಿಗಳು ಹಾಗು ಇತರ ಸೇವೆಗಳಲ್ಲಿ ವಿಳಂಬ ಅಥವಾ ಮಧ್ಯವರ್ತಿಗಳ ಹಾವಳಿ ಕಂಡುಬಂದಲ್ಲಿ ನಿಯಂತ್ರಿಸಬೇಕೆಂಬುದು ಸಾರ್ವಜನಿಕರ ಆಗ್ರಹವಾಗಿದೆ. ಅಧಿಕಾರಿಗಳಿಂದ ಸಂಗ್ರಹಿಸಿರುವ ದಾಖಲೆಗಳು ಹಾಗೂ ಸಾರ್ವಜನಿಕರಿಂದ ಸ್ವೀಕರಿಸಿರುವ ದೂರುಗಳ ಆಧಾರದ ಮೇಲೆ ಮುಂದಿನ ಕ್ರಮ ಕೈಗೊಳ್ಳುವ ಸಾಧ್ಯತೆ ಇದೆ.

## ಬೆಟ್ಟದ ಭೈರವೇಶ್ವರ ದೇವಾಲಯದಲ್ಲಿ ಮತ್ತೆ ಪ್ರವಾಸಿಗರ ಗಲಾಟೆ

» ಮೊದಲನೇ ಪುಟದಿಂದ

ಬರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

**ಆ.23ರ ವರೆಗೆ ಪ್ರವಾಸಿಗರಿಗೆ ನಿರ್ಬಂಧ**

ಆ.23ರಂದು ಎಂಟು ಗ್ರಾಮಗಳ ಗ್ರಾಮಸ್ಥರಿಂದ ದೇವಸ್ಥಾನದಲ್ಲಿ ವಿಶೇಷ ಪೂಜೆ ನಡೆಯಲಿರುವ ಹಿನ್ನಲೆಯಲ್ಲಿ ಆ. 18 ರಿಂದ 23ರ ವರೆಗೆ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲು ಸಭೆಯಲ್ಲಿ ನಿರ್ಣಯಿಸಲಾಗಿದೆ.

ದೇವಸ್ಥಾನ ಅಭಿವೃದ್ಧಿ ಸಮಿತಿ ಅಧ್ಯಕ್ಷ ಬೈರಮುಡಿ ಸುಬ್ರಾಯ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ದೇವಸ್ಥಾನದ ಅಭಿವೃದ್ಧಿ ಕಾಮಗಾರಿಗಳ ಕುರಿತು ಚರ್ಚಿಸಲಾಯಿತು. ಉಪಾಧ್ಯಕ್ಷ ಯೋಗೇಂದ್ರ ನೆಲೆಗಳ್ಳಿ ಹಾಗು ಕರವೇ ಕಾರ್ಮಿಕ ಘಟಕದ ಅಧ್ಯಕ್ಷ ಸಂಗ್ರಾಮ್ ಹೊಡಚಳ್ಳಿ ಅವರು ಮಾತನಾಡಿ, ಶಾಸಕರ ಅನುದಾನದಲ್ಲಿ ಕೈಗೆತ್ತಿಕೊಂಡಿರುವ ಅಭಿವೃದ್ಧಿ ಕಾಮಗಾರಿಗೆ ಅಡ್ಡಿಯಾಗದಂತೆ ಕ್ರಮ ಕೈಗೊಳ್ಳಬೇಕೆಂದರು.

ವಿಶೇಷ ಪೂಜೆ ಹಾಗು ಧಾರ್ಮಿಕ ಕಾರ್ಯಕ್ರಮಗಳು ಶಾಂತಿಯುತವಾಗಿ ನಡೆಯಲು ಅಗತ್ಯ ಭದ್ರತಾ ವ್ಯವಸ್ಥೆ ಕಲ್ಪಿಸುವುದರ ಜೊತೆಗೆ ದೇವಸ್ಥಾನದ ಪಾವಿತ್ರ್ಯಕ್ಕೆ ಧಕ್ಕೆ ಉಂಟು ಮಾಡುವವರ ವಿರುದ್ಧ ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಗ್ರಾಮಸ್ಥರು ಆಗ್ರಹಿಸಿದರು.

## ವಿದ್ಯಾರ್ಥಿಗಳು ಶಿಕ್ಷಕರ ಮಾರ್ಗದರ್ಶನದಲ್ಲಿ ನಡೆಯಿರಿ

» ಮೊದಲನೇ ಪುಟದಿಂದ

ಮಾಡುವವರಿಗೆಕಾನೂನಿನಲ್ಲಿರುವ ಶಿಕ್ಷೆಗಳ ಹಾಗೂ ದಂಡದ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿದರು.

ಜಿಲ್ಲೆಯ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಶ್ರೀನಿಧಿ ಅವರು ಮಾತನಾಡಿ, ಪ್ರತಿಯೊಬ್ಬ ವಿದ್ಯಾರ್ಥಿಗಳು ಕಷ್ಟ ಪಟ್ಟು ಮೇಲೆ ಬರಬೇಕು. ವಿದ್ಯಾರ್ಥಿಗಳು ಜೀವನದಲ್ಲಿ ನೋವನ್ನು ಕಷ್ಟಗಳನ್ನು ಅನುಭವಿಸಬೇಕು ಆಗ ಮಾತ್ರ ಭವ್ಯ ಭವಿಷ್ಯವನ್ನು ರೂಪಿಸಿಕೊಳ್ಳಲು ಸಾಧ್ಯ. ಜೀವನದಲ್ಲಿ ಎಲ್ಲರಿಗೂ ಬೆಲ್ಲದ ಆಸೆಯೇ ಹೆಚ್ಚು. ಆದರೆ, ಬೇವಿನ ಒಳ್ಳೆಯ ಔಷಧಿ ಗುಣಗಳೂ ಯಾರಿಗೂ ಬೇಡವಾಗಿದೆ. ಯುವಕರಿಗೆ ಜೀವನಕ್ಕೆ ಬೇಡವಾದ ಡ್ರಗ್ಸ್ , ಮದ್ಯಪಾನ, ಧೂಮಪಾನ ಎಂಬ ದುಶ್ಚಟಗಳಿಗೆ ಮಾರು ಹೋಗದೆ ವಿದ್ಯಾರ್ಥಿಗಳು ಕೆಲವೊಂದಕ್ಕೆ ಸ್ವಯಂ ನಿಯಂತ್ರಣ ಹಾಕಿಕೊಂಡರೆ ಮಾತ್ರ ಜೀವನವನ್ನು ಶ್ರೇಷ್ಠವಾಗಿಸಿಕೊಳ್ಳಬಹುದು ಎಂದರು.

ಸರ್ಕಾರಿ ಇಂಜಿನೀಯರಿಂಗ್ ಕಾಲೇಜು ಪ್ರಾಂಶುಪಾಲ ಗಿರೀಶ್ ಅವರು ಮಾತನಾಡಿ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುವಾಗ ತಂದೆ-ತಾಯಿಯವರ ಕಷ್ಟಗಳನ್ನು ಮನಸ್ಸಲ್ಲಿ ಇಟ್ಟುಕೊಂಡು ವ್ಯಾಸಂಗ ಮಾಡಿ ಹಾಗೂ ಯಾವುದೇ ಮಾದಕ ವಸ್ತುಗಳಿಗೆ ದಾಸರಾಗದೇ, ತಂದೆ-ತಾಯಿಯರಿಗೆ ದ್ರೋಹ ಮಾಡದಿದ್ದರೇ ಜೀವನವೂ ನಿಮ್ಮನ್ನು ತಾನಾಗಿಯೇ ಉನ್ನತ ಮಟ್ಟಕ್ಕೆ ಕರೆದೊಯ್ಯುತ್ತದೆ ಎಂದರು.

ಭುವನೇಶ್ವರಿ ಮದ್ಯಪಾನ ಸೇವನಿಗಳ ಸಮಗ್ರ ಪುನರ್ವಸತಿ ಕೇಂದ್ರದ ಯೋಜನಾ ನಿರ್ದೇಶಕರಾದ ಅಂಜಲಿದೇವಿ, ಗೋವಿಂದರಾಜು ಮತ್ತಿತರರು ಉಪಸ್ಥಿತರಿದ್ದರು.

# ನಮ್ಮ ಆಡಳಿತದಲ್ಲಿ ನಿಮ್ಮ ಹಸ್ತಕ್ಷೇಪ ಸರಿಯಲ್ಲ

### ತಮಿಳುನಾಡು ನಡೆಗೆ ಸಿ.ಎಂ. ತಿರುಗೇಟು | ಸಿಬಿಐ ತನಿಖೆ ಆಗ್ರಹಕ್ಕೆ ಆಕ್ಷೇಪ

• ಪ್ರಜೋದಯ ವರದಿ



**ಬೆಂಗಳೂರು:** ಯಾವುದೇ ರಾಜ್ಯವೂ ಇನ್ನೊಂದು ರಾಜ್ಯದ ಆಡಳಿತದಲ್ಲಿ ಹಸ್ತಕ್ಷೇಪ ಮಾಡ ಬಾರದು. ಇದು ಒಕ್ಕೂಟ ವ್ಯವಸ್ಥೆ ಎನ್ನುವುದು ನೆನಪಿರಲಿ ಎಂದು ತಮಿಳುನಾಡು ಮಾಜಿ ಮುಖ್ಯಮಂತ್ರಿ ಪನ್ನೀರ್ ಸೆಲ್ವಂಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿರುಗೇಟು ನೀಡಿದ್ದಾರೆ.

ಹನೂರು ಶೂಟೌಟ್ ಪ್ರಕರಣ ತನಿಖೆಯನ್ನು ಸಿಬಿಐಗೆ ವಹಿಸಬೇಕೆಂಬ ಪನ್ನೀರ್ ಸೆಲ್ವಂ ಅವರ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಅವರು, ತಮಿಳುನಾಡಿನ ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆಯಲ್ಲಿ ನಾನು ಮಧ್ಯಪ್ರವೇಶಿಸಲು ಸಾಧ್ಯವಿಲ್ಲ. ಪ್ರತಿಯೊಂದು ರಾಜ್ಯಕ್ಕೂ ತನ್ನದೇ ಆದ ಸಮಸ್ಯೆ ಇರುತ್ತದೆ. ಅದನ್ನು ಅವರೂ ತಿಳಿದುಕೊಳ್ಳಬೇಕು. ನಮ್ಮ ರಾಜ್ಯವನ್ನು ಹೇಗೆ ರಕ್ಷಿಸಿಕೊಳ್ಳಬೇಕೆಂಬುದು ನಮಗೆ ತಿಳಿದಿದೆ. ಅವರು ತಮ್ಮ ಕೆಲಸವನ್ನು ಮಾಡಲಿ. ನಾವು ನಮ್ಮ ಕೆಲಸ ಮಾಡುತ್ತೇವೆ. ಅವರ ಆಡಳಿತದಲ್ಲಿ ಹಸ್ತಕ್ಷೇಪ ಮಾಡಲು ನಾನು ಬಯಸುವುದಿಲ್ಲ. ನಮ್ಮ ರಾಜ್ಯಕ್ಕಿರುವ ಪವಿತ್ರತೆಯನ್ನು ನಾವು ಕಾಪಾಡಿಕೊಳ್ಳಬೇಕು, ರಕ್ಷಿಸಬೇಕೆಂದರು.

**ಮೃತರಿಗೆ ಪರಿಹಾರ ಘೋಷಣೆ**

ಅರಣ್ಯ ಇಲಾಖೆ ಗುಂಡೇಟಿಗೆ ಬಲಿಯಾದ ಮೂವರು ಶಂಕಿತ ಬೇಟೆಗಾರರ ಕುಟುಂಬಕ್ಕೆ ತಮಿಳುನಾಡು ಸರ್ಕಾರ ತಲಾ 10 ಲ.ರೂ. ಪರಿಹಾರ ಘೋಷಿಸಿದೆ.

ತಮಿಳುನಾಡು ವಿಧಾನಸಭೆಯಲ್ಲೂ ಹನೂರು ಶೂಟೌಟ್ ವಿಚಾರ ಪ್ರಸ್ತಾಪವಾಗಿದ್ದು, ಡಿಎಂಕೆ ಮತ್ತು ಎಐಡಿಎಂಕೆ ಮುಖಂಡರು ಈ ಬಗ್ಗೆ ಸದನದಲ್ಲಿ ಧ್ವನಿ ಎತ್ತಿದರು. ಈ ವೇಳೆ ಮೃತರ ಕುಟುಂಬಗಳಿಗೆ ತಲಾ 10 ಲ.ರೂ. ಪರಿಹಾರ ನೀಡುವುದಾಗಿ ಅರಣ್ಯ ಸಚಿವ ರಂಜಿತ್ ಕುಮಾರ್ ಘೋಷಿಸಿದ್ದು, ಕರ್ನಾಟಕ ಸರ್ಕಾರವು ಪ್ರಕರಣವನ್ನು ಸಿಬಿಐಗೆ ವಹಿಸಬೇಕೆಂಬ ಆಗ್ರಹವೂ ವ್ಯಕ್ತವಾಗಿದೆ.

ಮೃತರೆಲ್ಲರೂ ತಮಿಳುನಾಡು ಮೂಲದವರು. ಮೆಟ್ಟೂರು ಜಲಾಶಯ ನಿರ್ಮಾಣದಿಂದ ಹನೂರಿನಲ್ಲಿ ಅವರು ವಾಸವಿದ್ದು, ಅವರೆಲ್ಲ ತಮಿಳರು. ಅವರ ರಕ್ಷಣೆಯಾಗಬೇಕೆಂಬ ಅಭಿಪ್ರಾಯಗಳು ಸದನದಲ್ಲಿ ವ್ಯಕ್ತವಾಗಿವೆ.

ಅರಣ್ಯಾಧಿಕಾರಿಗಳು ಬಿಡುಗಡೆ ಮಾಡಿದ ಫೋಟೋಗಳಲ್ಲಿ ಸ್ಟಿಕ್ಕರ್ ತೆಗೆಯದ ಹೊಸ ಚಪ್ಪಲಿ ಇರುವ ಬಗ್ಗೆಯೂ ಚರ್ಚೆಯಾಗಿದೆ. ಮೃತರ ಕುಟುಂಬಕ್ಕೆ ಕರ್ನಾಟಕ ಸರ್ಕಾರ 1 ಕೋ.ರೂ. ಪರಿಹಾರ ನೀಡಬೇಕು ಮತ್ತು ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕೆಂದು ತಮಿಳುನಾಡು ಶಾಸಕರು ಆಗ್ರಹಿಸಿದ್ದಾರೆ.

**ಬಿಜೆಪಿಯಿಂದ ಸತ್ಯ ಶೋಧನಾ ಸಮಿತಿ**

ಹನೂರು ವನ್ಯಜೀವಿ ವಲಯದಲ್ಲಿ ಮೂವರು ಶಂಕಿತ ಬೇಟೆಗಾರರ ಮೇಲೆ ನಡೆದ ಶೂಟೌಟ್ ಪ್ರಕರಣ ಸಂಬಂಧ ಅಧ್ಯಯನಕ್ಕೆ ಬಿಜೆಪಿ ಸತ್ಯಶೋಧನಾ ತಂಡ ರಚಿಸಿದೆ.

ತಂಡದಲ್ಲಿ ರಾಜ್ಯ ಬಿಜೆಪಿ ಉಪಾಧ್ಯಕ್ಷ ಎನ್.ಮಹೇಶ್, ರಾಜ್ಯ ಕಾರ್ಯದರ್ಶಿ ಲಕ್ಷ್ಮಿ ಅಶ್ವಿನ್ ಗೌಡ, ಪಕ್ಷದ ಅಲ್ಪಸಂಖ್ಯಾತ ಮೋರ್ಚಾದ ರಾಜ್ಯ ಅಧ್ಯಕ್ಷ ಅನಿಲ್ ಥಾಮಸ್, ಮಾಜಿ ಶಾಸಕ ಸಿ.ಎಸ್.ನಿರಂಜನ್ ಕುಮಾರ್ ಮತ್ತು ಹನೂರು ವೆಂಕಟೇಶ್ ಇದ್ದಾರೆ.

ಘಟನಾ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿ, ಒಂದು ವಾರದೊಳಗೆ ಸಮಗ್ರ ವರದಿ ಯನ್ನು ಸಲ್ಲಿಸಲು ಸಮಿತಿಯ ಸದಸ್ಯರಿಗೆ ಸೂಚಿಸಲಾಗಿದೆ.

ಘಟನೆಯ ಬಗ್ಗೆ ರಾಜ್ಯ ಸರ್ಕಾರ ಮ್ಯಾಜಿಸ್ಟೀರಿಯಲ್ ತನಿಖೆಯನ್ನು ರಚಿಸಿದ್ದು, ಕೊಳ್ಳೇಗಾಲ ಸಹಾಯಕ ಆಯುಕ್ತ ದಿನೇಶ್ ಕುಮಾರ್ ಮೀನಾ ತನಿಖೆ ನಡೆಸುತ್ತಿದ್ದಾರೆ.

## ಉಪಸಭಾಪತಿಯಾಗಿ ಉಮಾಶ್ರೀ ಅವಿರೋಧ ಆಯ್ಕೆ



• ಪ್ರಜೋದಯ ವರದಿ

**ಬೆಂಗಳೂರು:** ಕರ್ನಾಟಕ ವಿಧಾನ ಪರಿಷತ್‌ಗೆ ಉಪಸಭಾಪತಿಯಾಗಿ ಮಾಜಿ ಸಚಿವೆ ಉಮಾಶ್ರೀ ಅವರು ಅವಿರೋಧ ಆಯ್ಕೆಯಾದರು.

ಪರಿಷತ್ ಕಲಾಪ ಪ್ರಾರಂಭವಾಗುತ್ತಿದ್ದಂತೆ ಸಭಾಪತಿ ಸಲೀಂ ಅವರು, ಉಪಸಭಾಪತಿ ಸ್ಥಾನಕ್ಕೆ ಚುನಾವಣಾ ಪ್ರಕ್ರಿಯೆ ಆರಂಭಿಸಿದರು. ಸಚಿವ ಡಾ.ಯತೀಂದ್ರ ಅವರು ಉಪ ಸಭಾಪತಿಯನ್ನಾಗಿ ಉಮಾಶ್ರೀ ಅವರನ್ನು ಚುನಾಯಿಸಬೇಕೆಂದು ಪ್ರಸ್ತಾವನೆ ಮಂಡಿಸಿದರು.

ಈ ಪ್ರಸ್ತಾವನೆಗೆ ಸದಸ್ಯರಾದ ಎಫ್.ಹೆಚ್.ಜಕ್ಕಪ್ಪನವರ್, ಪಿ.ಸಿ. ಮೋಹನ್, ಬಸನಗೌಡ ಬಾದರ್ಲಿ, ಎ.ವಿ.ಗಾಯತ್ರಿ ಶಾಂತೇಗೌಡ, ಜಗದೇವ್ ಗುತ್ತೇದಾರ್, ರಾಮೋಜಿಗೌಡ ಹಾಗು ರಾಜಣ್ಣ ಅವರು ಸೂಚಿಸಿದರು. ಸದಸ್ಯರ ಅನುಮೋದನೆಯನ್ನು ಕಾಂಗ್ರೆಸ್ ಸದಸ್ಯೆ ಡಾ.ಆರತಿ ಕೃಷ್ಣ ಅವರು ಅನುಮೋದಿಸಿದರು.

ಬಳಿಕ ಸಭಾಪತಿ ಸಲೀಂ ಅವರು ಉಮಾಶ್ರೀ ಅವರು ವಿಧಾನಪರಿಷತ್‌ನ ಉಪ ಸಭಾಪತಿಯಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಘೋಷಣೆ ಮಾಡಿದರು. ನಂತರ ಸಭಾನಾಯಕ ಡಾ.ಯತೀಂದ್ರ, ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಸೇರಿ ಇತರ ಸದಸ್ಯರು ಉಮಾಶ್ರೀ ಅವರನ್ನು ಸಭಾಪತಿಗಳ ಪೀಠಕ್ಕೆ ಕರೆದೊಯ್ದರು.

ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಮಾತನಾಡಿ, ಉಮಾಶ್ರೀ ಅವರು ಅತ್ಯುತ್ತಮ ನಟಿ. ಸುಮಾರು ನಾಲ್ಕು ದಶಕಕ್ಕೂ ಹೆಚ್ಚು ಕಾಲ ಚಿತ್ರರಂಗದಲ್ಲಿ ಗುರುತಿಸಿಕೊಂಡು, ಕರ್ನಾಟಕ ಮತ್ತು ಕನ್ನಡ ಭಾಷೆಯನ್ನು ಅಂತಾರ್‍ರಾಷ್ಟ್ರೀಯ ಮಟ್ಟಕ್ಕೆ ಪರಿಚಯಿಸಿದ್ದಾರೆಂದರು.

## ಬರ ಪರಿಸ್ಥಿತಿ ನಿಭಾಯಿಸುವಲ್ಲಿ ಸರ್ಕಾರ ವಿಫಲ

» ಮೊದಲನೇ ಪುಟದಿಂದ

ಮತ್ತು ಕೇಂದ್ರ, ಸರ್ಕಾರಗಳು ಸೂಕ್ತ ತನಿಖೆ ನಡೆಸಿ ಅಸಮಾನತೆ, ಜಾತೀಯತೆ ಪ್ರೋತ್ಸಾಹಿಸುವವರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು. ಜಿಲ್ಲಾ ಜೆಡಿಎಸ್ ವಕ್ತಾರ ರಘು ಹೊಂಗೆರೆ, ಮುಖಂಡ ರಾದ ಸತೀಶ್, ರಂಗಸ್ವಾಮಿ, ಸಮೀರ್ ಇದ್ದರು.

**ಕಸ್ತೂರಿ ರಂಗನ್ ವಿರುದ್ಧ ಸಂಸದರು ಧ್ವನಿ ಎತ್ತಲಿ**

ಮಲೆನಾಡು ಭಾಗದ ರೈತರು ಜನ ಸಾಮಾನ್ಯದ ಬದುಕಿಗೆ ಧಕ್ಕೆಯಾಗುವ ಕಸ್ತೂರಿ ರಂಗನ್ ವರದಿಯನ್ನು ಯಾವುದೇ ಕಾರಣಕ್ಕೂ ಜಾರಿ ಮಾಡ ಬಾರದು, ಜಾರಿಗೊಳಿಸಿದರೆ ಹೋರಾಟ ಅನಿವಾರ್ಯ. ಆಕ್ಷೇಪಣೆ ಸಲ್ಲಿಸುವ ಸಂಬಂಧ ಈಗಾಗಲೇ ಸಂಘ-ಸಂಸ್ಥೆಗಳೊಂದಿಗೆ ಚರ್ಚೆ ಮಾಡಿದ್ದೇನೆ. ಈ ಬಗ್ಗೆ ಸಂಸದರು ಧ್ವನಿ ಎತ್ತಬೇಕು. ಕಾನೂನು ರೂಪಿಸುವವರು ನಾವೇ ಆಗಿರುವುದರಿಂದ, ಜನರ ಬದುಕಿಗೆ ಕಂಟಕವಾಗುವ ಕ್ರಮಗಳನ್ನು ತೆಗೆದು ಹಾಕಲು ಕ್ರಮ ತೆಗೆದುಕೊಳ್ಳಬೇಕಾಗುತ್ತದೆಂದು ಹೆಚ್.ಕೆ.ಕುಮಾರಸ್ವಾಮಿ ಹೇಳಿದರು.

## ಮಲ್ಲಿಕಾರ್ಜುನ ಖರ್ಗೆಗೆ ಅವಮಾನ ಖಂಡಿಸಿ ಪ್ರತಿಭಟನೆ



• ಪ್ರಜೋದಯ ವರದಿ

**ಹಾಸನ:** ಉತ್ತರಾಖಂಡದ ರಾಮಲೀಲಾ ಮೈದಾನದಲ್ಲಿ ಇತ್ತೀಚೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಭಾಷಣದ ಬಳಿಕ ಹವನದ ಮುಖಾಂತರ ಶುದ್ಧೀಕರಿಸಿರುವುದನ್ನು ಖಂಡಿಸಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಜಿಲ್ಲಾ ಕಾಂಗ್ರೆಸ್ ಕಚೇರಿಯಿಂದ ಜಿಲ್ಲಾಧಿಕಾರಿ ಕಚೇರಿ ವರೆಗೆ ಮೆರವಣಿಗೆಯಲ್ಲಿ ಬಂದ ಪ್ರತಿಭಟನಾಕಾರರು ಕೇಂದ್ರ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು. ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ ಅವರ ಮೂಲಕ ರಾಷ್ಟ್ರಪತಿಗೆ ಮನವಿ ಸಲ್ಲಿಸಲಾಯಿತು.

ಸಂಸದ ಶ್ರೇಯಸ್ ಪಟೇಲ್ ಅವರು ಮಾತನಾಡಿ, ಭಾರತದ ಸಂವಿಧಾನವು ಪ್ರತಿಯೊಬ್ಬರಿಗೂ ಸಮಾನತೆ ಮತ್ತು ಗೌರವದ ಹಕ್ಕು ನೀಡಿದೆ. ಯಾವುದೇ ವ್ಯಕ್ತಿಯ ಸಾಮಾಜಿಕ ಹಿನ್ನಲೆ ಯನ್ನು ಆಧರಿಸಿ ಅವಮಾನಿಸುವ ಅಥವಾ ಅಸಮಾನತೆಯನ್ನು ಬಿಂಬಿಸುವ ಕೃತ್ಯಗಳನ್ನು ಒಪ್ಪಲು ಸಾಧ್ಯವಿಲ್ಲ. ಇಂತಹ ಘಟನೆಗಳು ಸಂವಿಧಾನದ ಮೂಲ ಆಶಯಗಳಿಗೆ ವಿರುದ್ದವಾಗಿದ್ದು, ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಈ ಘಟನೆ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮಾಡಿದ ಅವಮಾನ ಮಾತ್ರವಲ್ಲ, ದೇಶದ ದಲಿತರು, ಹಿಂದುಳಿದವರು ಹಾಗು ಅಲ್ಪಸಂಖ್ಯಾತರಿಗೆ ಮಾಡಿದ ಅಪಮಾನ. ಪ್ರತೀಕಾರ ಮತ್ತು ದ್ವೇಷದ ರಾಜಕಾರಣಕ್ಕೆ ಸಾಕ್ಷಿಯಾಗಿದೆ. ದಲಿತ ನಾಯಕರು ಹಾಗು ಸಂವಿಧಾನಕ್ಕೆ ಅವಮಾನವಾಗುವಂತಹ ಕೃತ್ಯಕ್ಕೆ ಕಾರಣರಾದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಈ.ಹೆಚ್.ಲಕ್ಷ್ಮಣ್, ಯೂತ್ ಕಾಂಗ್ರೆಸ್ ಜಿಲ್ಲಾಧ್ಯಕ್ಷ ರಂಜಿತ್ ಗೊರೂರು, ಮುಖಂಡರಾದ ತಾರಾ ಚಂದನ್, ರಘು ದಾಸರಕೊಪ್ಪಲು, ಮಲ್ಲಿಗೆವಾಳು ದ್ಯಾವಪ್ಪ, ಚಂದ್ರಶೇಖರ್, ದೇವರಾಜು, ರಾಮಚಂದ್ರ, ಪ್ರಕಾಶ್, ಲಕ್ಷ್ಮಣ್, ಜಯರಾಮ್ ಮೊದಲಾದವರಿದ್ದರು.

## ಮನೆ ಬೀಗ ಮುರಿದು ಬೆಳ್ಳಿ ಆಭರಣ ಕಳವು

**ಹಾಸನ:** ಮನೆ ಮಾಲೀಕ ವಿದೇಶಕ್ಕೆ ಹೋಗಿರುವ ಸುದ್ದಿ ತಿಳಿದು ಮಧ್ಯರಾತ್ರಿ ಬಾಗಿಲ ಬೀಗ ಮುರಿದು ಒಳನುಗ್ಗಿರುವ ಕಳ್ಳರು 50 ಸಾವಿರ ರೂ. ಮೌಲ್ಯದ ಬೆಳ್ಳಿ ಆಭರಣ ಹಾಗು 25 ಸಾವಿರ ರೂ. ನಗದು ಕದ್ದಿರುವ ಘಟನೆ ಜಯನಗರದಲ್ಲಿ ನಡೆದಿದೆ.

ನಿವಾಸಿ ಕೆ.ಆರ್. ಸಿದ್ದೇಶ್ ಎಂಬುವವರ ಮನೆಯಲ್ಲಿ ಆ. 10ರಂದು ಕಳ್ಳತನವಾಗಿದೆ. ಪುತ್ರ ಲಂಡನ್‌ನಲ್ಲಿ ಕೆಲಸ ಮಾಡುತ್ತಿದ್ದು ಸಿದ್ದೇಶ್ ಅವರು ಒಂದು ತಿಂಗಳ ಹಿಂದೆ ಅಲ್ಲಿಗೆ ತೆರಳಿದ್ದಾರೆ. ಅವರ ಸಹೋದರ ಗಿರೀಶ್ ಆಗಾಗ ಮನೆ ಕಡೆಗೆ ಬಂದು ನೋಡುತ್ತಿದ್ದರು. ಆ. 11ರಂದು ಬಂದಾಗ ಬಾಗಿಲು ಮುರಿದಿರುವುದು ತಿಳಿದಿದೆ. ಬಲವಾದ ಆಯುಧದಿಂದ ಬೀರುವಿನ ಬಾಗಿಲು ಮುರಿದಿರುವ ಕಳ್ಳರು ಒಂದು ಬೆಳ್ಳಿ ತಟ್ಟೆ, ಒಂದು ಲೋಟ, ಎರಡು ಲಿಂಗದ ಕಾಯಿ, ಎರಡು ಕುಂಕುಮದ ಬಟ್ಟಲು, ಒಂದು ಜೊತೆ ಕಾಲ್ಗೆಜ್ಜೆ, ಒಂದು ಕೈಖಡ್ಗ, ಒಂದು ಸಿಲ್ವರ್ ಪದಕ, ಒಂದು ಬೆಳ್ಳಿಯ ಸೊಂಟದ ಡಾಬು ಕದ್ದಿದ್ದು ಒಟ್ಟು 500 ಗ್ರಾಂ ತೂಕ ಹೊಂದಿದೆ. ಅಲ್ಲೇ ಇದ್ದ 25 ಸಾವಿರ ರೂ. ದೋಚಿದ್ದಾರೆ.

## ಕನಿಷ್ಟ ವೇತನಕ್ಕೆ ಆಗ್ರಹಿಸಿ ಗ್ರಾ.ಪಂ. ನೌಕರರ ಪ್ರತಿಭಟನೆ

» ಮೊದಲನೇ ಪುಟದಿಂದ

ವೇತನದ ಅಧಿಸೂಚನೆ ಜಾರಿಯಲ್ಲಿದೆ. ಆದರೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಪರಿಷ್ಕೃತ ವೇತನ ಪಾವತಿಗೆ ಅಗತ್ಯ ಅನುದಾನ ಬಿಡುಗಡೆ ಮಾಡುತ್ತಿಲ್ಲವೆಂದು ಆರೋಪಿಸಿದರು.

ಪರಿಷ್ಕೃತ ಕನಿಷ್ಟ ವೇತನದ ಆದೇಶವನ್ನು ಕೂಡಲೇ ಜಾರಿಗೊಳಿಸಿ ನೌಕರರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಮನವಿ ಮಾಡಿದರು. ಕರ ವಸೂಲಿಗಾರ, ಡಾಟಾ ಎಂಟ್ರಿ ಆಪರೇಟರ್, ನೀರುಗಂಟಿ, ಜವಾನ ಹಾಗು ಸ್ವಚ್ಛತಾ ಕೆಲಸಗಾರರನ್ನು ಸರ್ಕಾರಿ ನೌಕರರೆಂದು ಪರಿಗಣಿಸಬೇಕು. ಸೇವಾ ಹಿರಿತನ ಪರಿಗಣಿಸಿ ಸಂಬಳ ಹೆಚ್ಚಿಸಬೇಕು. ಗ್ರಾಮ ಪಂಚಾಯಿತಿ ನೌಕರರು ನಿವೃತ್ತಿ ಅಥವಾ ಅಕಾಲಿಕ ಮರಣ ಹೊಂದಿದರೆ 6 ಲ.ರೂ. ಇಡುಗಂಟು ನೀಡಬೇಕು. ಪ್ರತಿ ಪಂಚಾಯಿತಿಗೆ ಲೆಕ್ಕ ಸಹಾಯಕ ಹುದ್ದೆ ಸೃಷ್ಟಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಟಿ.ಹೊನ್ನೇಗೌಡ, ಲಕ್ಷ್ಮಣ್, ಅಶೋಕ್, ಚಂದ್ರೇಗೌಡ, ಹೆಚ್.ಆರ್. ನವೀನ್‌ಕುಮಾರ್, ಇಅರವಿಂದ್ ಇದ್ದರು.

## ಪವಿತ್ರ ಯಾತ್ರಾ ಸ್ಥಳವಾಗಿ ಬದಲಾಗಲಿದೆ ಮಾಡಾಳು

• ಪ್ರಜೋದಯ ವರದಿ



**ಮಾಡಾಳು:** ಇತಿಹಾಸ ಪ್ರಸಿದ್ಧ ಸ್ವರ್ಣಗೌರಿ ದೇವಾಲಯವು ಭವಿಷ್ಯದಲ್ಲಿ ನಾಡಿನ ಶ್ರೇಷ್ಠ ಧಾರ್ಮಿಕ ಯಾತ್ರಾ ಸ್ಥಳವಾಗಿ ಮಾರ್ಪಾಡಾಗಲಿದೆ ಎಂದು ಹಾರನಹಳ್ಳಿ ಕೋಡಿಮಠದ ಡಾ. ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಭವಿಷ್ಯ ನುಡಿದರು.

ಮೂಲಸ್ಥಾನ ಶ್ರೀ ಸ್ವರ್ಣಗೌರಿ ದೇವಾಲಯ ಲೋಕಾರ್ಪಣೆ ಬಳಿಕ ಭಕ್ತರು ಹಮ್ಮಿಕೊಂಡಿದ ಪಾದಪೂಜೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತನ್ನ ಇಷ್ಟದಂತೆ ಆಲಯವನ್ನು ನಿರ್ಮಿಸಿಕೊಂಡಿರುವ ಸ್ವರ್ಣಗೌರಿ ದೇವಿಯು ಮುಂದಿನ ದಿನಗಳಲ್ಲಿ ನಂಬಿ ಬರುವ ಭಕ್ತ ಸಂಕುಲವನ್ನು ಉದ್ಧರಿಸುತ್ತಾಳೆ. ಈ ಗ್ರಾಮ ಪವಿತ್ರ ಧಾರ್ಮಿಕ ಯಾತ್ರಾ ಸ್ಥಳವಾಗಿ ಹೊರಹೊಮ್ಮಲಿದೆ ಎಂದರು.

ಸ್ವರ್ಣ ಗೌರಮ್ಮ ದೇವಿ ಶಕ್ತಿ ದೇವತೆಯಾಗಿದ್ದು ಕೋಡಿಮಠದ ಕರ್ತೃಗಳಾದ ನೀಲಮ್ಮಜ್ಜಯ್ಯ ಹಾಗು ಶಿವಲಿಂಗ ಸ್ವಾಮೀಜಿಯವರ ಕೃಪಾಶೀರ್ವಾದ ಶಕ್ತಿಯಾಗಿದ್ದು ಈ ದೇವಾಲಯದ ಮೂಲಕ ಜಗಜ್ಯೋತಿಯಾಗಿ ಬೆಳಗಲಿದೆ. ಬದುಕಿನಲ್ಲಿ ನೊಂದು ಬೆಂದು ಬರುವ ಭಕ್ತರ ಪಾಲಿಗೆ ಈ ಜ್ಯೋತಿಯು ನಂದಾದೀಪವಾಗಿ ಮನೆ ಮತ್ತು ಮನವನ್ನು ಬೆಳಗಲಿದೆ ನುಡಿದರು.

ಕುಪ್ಪೂರು ಗದ್ದಿಗೆ ಮಠದ ವಾಗೀಶ ಪಂಡಿತಾರಾಧ್ಯ, ಗೌರಮ್ಮ ದೇವಿ ಸೇವಾ ಸಮಿತಿ ಪದಾಧಿಕಾರಿಗಳು ಹಾಗು ಭಕ್ತರು ಹಾಜರಿದ್ದರು.

## ಗ್ರಾಮೀಣ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ದೊರೆಯಲಿ

### ವಿಸ್ಡಮ್ ಪಿಯು ಕಾಲೇಜಿಗೆ ಭೂಮಿ ಪೂಜೆ : ಶಾಸಕ ಎ.ಮಂಜು

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ಮೋಕಲಿ ಗ್ರಾಮದಲ್ಲಿ ನೂತನವಾಗಿ ಆರಂಭಗೊಳ್ಳುತ್ತಿರುವ ವಿಸ್ಡಮ್ ಪಿಯು ಕಾಲೇಜಿನಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ದೊರೆಯುವಂತಾಗಬೇಕೆಂದು ಶಾಸಕ ಎ.ಮಂಜು ಅವರು ಹೇಳಿದರು.

ತಾಲ್ಲೂಕಿನ ಮೋಕಲಿಯಲ್ಲಿರುವ ವಿಸ್ಡಮ್ ವ್ಯಾಲಿ ಇಂಟರ್‌ನ್ಯಾಷನಲ್ ಸ್ಕೂಲ್‌ನ ಮುಂದು ವರಿದ ಭಾಗವಾಗಿ ಆರಂಭಗೊಳ್ಳುತ್ತಿರುವವಿಸ್ಡಮ್ ಪಿಯು ಕಾಲೇಜಿಗೆ ಶಾಸಕ ಎ.ಮಂಜು ಅವರು ಭೂಮಿಪೂಜೆ ನೆರವೇರಿಸಿ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಖಾಸಗಿ ಪಿಯು ಕಾಲೇಜುಗಳ ಕೊರತೆ ಯಿದ್ದು, ಈ ಭಾಗದ ವಿದ್ಯಾರ್ಥಿಗಳಿಗೆ ಪಿಯು ಶಿಕ್ಷಣ ಪಡೆಯಲು ಇನ್ನಷ್ಟು ಉತ್ತಮ ಅವಕಾಶಗಳ ಅಗತ್ಯವಿತ್ತು. ಇದನ್ನು ಮನಗಂಡು ವಿಸ್ಡಮ್ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಪಿಯು ಕಾಲೇಜು ಆರಂಭಿಸಲು ಮುಂದಾಗಿರು ವುದು ಸ್ವಾಗತಾರ್ಹ. ಈ ಕಾರ್ಯಕ್ಕೆ ವೈಯಕ್ತಿಕವಾಗಿ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.



ಪಿಯು ಕಾಲೇಜಿನ ಜೊತೆಗೆ ವಿದ್ಯಾರ್ಥಿಗಳಿಗೆ ಹಾಸನ ಭಾಗದಲ್ಲಿ ದೊರೆಯುವ ವಿಶೇಷ ಶೈಕ್ಷಣಿಕ ಸೌಲಭ್ಯಗಳು ಹಾಗೂ ಅಗತ್ಯ ತರಬೇತಿಗಳನ್ನು ಒದಗಿಸುವ ಕೆಲಸವೂ ನಡೆಯಬೇಕು. ಅದರಿಂದ ತಾಲ್ಲೂಕಿನ ವಿದ್ಯಾರ್ಥಿಗಳಿಗೆ ಉತ್ತಮ ಶೈಕ್ಷಣಿಕ ಅವಕಾಶಗಳು ದೊರೆಯಲಿವೆ ಎಂದು ಸಲಹೆ ನೀಡಿದರು.

ಇತ್ತೀಚಿನ ದಿನಗಳಲ್ಲಿ ಪೋಷಕರು ತಮ್ಮ ಮಕ್ಕಳಿಗೆ ಉತ್ತಮ ಹಾಗೂ ಜವಾಬ್ದಾರಿಯುತ ಶಿಕ್ಷಣ ನೀಡಲು ಹೆಚ್ಚಿನ ಆಸಕ್ತಿ ವಹಿಸುತ್ತಿದ್ದಾರೆ. ಶಿಕ್ಷಣದ ಮಹತ್ವದ ಕುರಿತು ರೈತಾಪಿ ವರ್ಗದಲ್ಲಿಯೂ ಅರಿವು ಹೆಚ್ಚುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ. ಮಕ್ಕಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಣ ಪ್ರಮುಖ ಪಾತ್ರ ವಹಿಸುತ್ತದೆ. ಈ ಹಿನ್ನಲೆಯಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯ ವಸತಿ ಸೌಲಭ್ಯವನ್ನೂ ಕಲ್ಪಿಸುವ ಬಗ್ಗೆ ಶಿಕ್ಷಣ ಸಂಸ್ಥೆ ಗಮನಹರಿಸಬೇಕು ಎಂದರು.

ದೇಶದ ಬದಲಾವಣೆ ವಿದ್ಯೆಯಿಂದ ಮಾತ್ರ ಸಾಧ್ಯ. ವಿದ್ಯಾರ್ಥಿಗಳು ಉತ್ತಮ ಶಿಕ್ಷಣದ ಜೊತೆಗೆ ಜ್ಞಾನವನ್ನು ಬೆಳೆಸಿಕೊಂಡು, ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿಕೊಂಡಾಗ ಸಮಾಜ ಹಾಗೂ ದೇಶದ ಅಭಿವೃದ್ಧಿಗೆ ಪರಿಣಾಮಕಾರಿ ಕೊಡುಗೆ ನೀಡಲು ಸಾಧ್ಯವಾಗುತ್ತದೆಂದು ತಿಳಿಸಿದರು.

ತಾಲ್ಲೂಕಿನ ವಿದ್ಯಾರ್ಥಿಗಳು ಶಿಕ್ಷಣಕ್ಕಾಗಿ ದೂರದ ಪ್ರದೇಶಗಳಿಗೆ ತೆರಳುವ ಅನಿವಾರ್ಯತೆ ಕಡಿಮೆಯಾಗಬೇಕು. ಸ್ಥಳೀಯವಾಗಿಯೇ ಗುಣಮಟ್ಟದ ಶಿಕ್ಷಣ, ಅಗತ್ಯ ತರಬೇತಿ ಹಾಗೂ ಉತ್ತಮ ಶೈಕ್ಷಣಿಕ ವಾತಾವರಣ ದೊರೆತರೆ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆಂದು ಅಭಿಪ್ರಾಯಪಟ್ಟರು.

ವಿಸ್ಡಮ್ ಪಿಯು ಕಾಲೇಜು ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಉತ್ತಮ ಶೈಕ್ಷಣಿಕ ಅವಕಾಶ ಕಲ್ಪಿಸುವ ಮೂಲಕ ಯಶಸ್ವಿಯಾಗಿ ಮುನ್ನಡೆಯಲಿ ಹಾಗೂ ತಾಲ್ಲೂಕಿನ ಶೈಕ್ಷಣಿಕ ಅಭಿವೃದ್ಧಿಗೆ ಕೊಡುಗೆ ನೀಡಲಿ ಎಂದು ಶಾಸಕ ಎ.ಮಂಜು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಶಿಕ್ಷಣ ಸಂಸ್ಥೆಯ ಕತ್ತೀಬ್ ರೆಹಮಾನ್, ಸಖೀಬ್ ರೆಹಮಾನ್, ಶಿಕ್ಷಕ ವೃಂದ, ಶಿಕ್ಷಣ ಸಂಸ್ಥೆಯ ಸಿಬ್ಬಂದಿ ಸೇರಿ ಇತರರು ಉಪಸ್ಥಿತರಿದ್ದರು.

## ರಾಜೀನಾಮೆ ಜಟಾಪಟಿ: ಕಲಾಪ ಬಲಿ

» ಮೊದಲನೇ ಪುಟದಿಂದ

ಸದನವು ಕಾರ್ಯನಿರ್ವಹಿಸುತ್ತದೆ ಮತ್ತು ಚರ್ಚೆಗೆ ಸಿದ್ದರಿದ್ದೇವೆಂದು ಸ್ಪೀಕರ್‌ಗೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಹೇಳಿದರು.

ಸ್ಪೀಕರ್ ಜಿ.ಎಸ್.ಪಾಟೀಲ್ ಅವರು, ನಿಯಮಗಳ ಪ್ರಕಾರ ಸದನವನ್ನು ನಡೆಸಲು ಅವಕಾಶ ನೀಡುವಂತೆ ಪ್ರತಿಪಕ್ಷಗಳನ್ನು ವಿನಂತಿಸಿದರು. ಸದನಕ್ಕೆ ಘನತೆ ತರುವ ನಿಟ್ಟಿನಲ್ಲಿ ಕೆಲಸ ಮಾಡೋಣ. ದಯವಿಟ್ಟು ಕಪ್ಪು ಸ್ಕಾರ್ಫ್‌ಗಳನ್ನು ತೆಗೆದುಹಾಕಿ. ನೋಟೀಸ್ ನೀಡಿ ಮತ್ತು ಈ ವಿಷಯವನ್ನು ಚರ್ಚಿಸಿ ಎಂದು ಹೇಳಿದರು. ಹಗರಣದ ಹಣದ ವಿವರಗಳ ಕುರಿತು ಅಶೋಕ್ ಅವರು ಮಾತನಾಡಲು ಪ್ರಾರಂಭಿಸುತ್ತಿದ್ದಂತೆ ನೋಟೀಸ್ ನೀಡದೆ ಮಾಡಿದ ಆರೋಪಗಳು ದಾಖಲಾಗದಂತೆ ನೋಡಿಕೊಳ್ಳುವಂತೆ ಸಚಿವ ಕೃಷ್ಣ ಬೈರೇಗೌಡ ಅವರು ಅಧ್ಯಕ್ಷರನ್ನು ವಿನಂತಿಸಿದರು.

ಇದು ಕಾನೂನುಬಾಹಿರ, ವಿರೋಧ ಪಕ್ಷ ರಾಜಕೀಯಕ್ಕಾಗಿ ಸದನದ ಸಮಯವನ್ನು ವ್ಯರ್ಥ ಮಾಡುತ್ತಿದೆ. ಅವರು ಸದನವನ್ನು ಕಾರ್ಯನಿರ್ವಹಿಸಲು ಬಿಡದೆ ಜನರಿಗೆ ಅನ್ಯಾಯ ಮಾಡುತ್ತಿದ್ದಾರೆಂದು ಸಚಿವರು ಆರೋಪಿಸಿದರು. ಅದಕ್ಕೆ ಹಕ್ಕುಚ್ಯುತಿ ಉಲ್ಲಂಘನೆಯ ಕುರಿತು ನಿರ್ಣಯ ಮಂಡಿಸಲು ಅಶೋಕ್ ಸವಾಲು ಹಾಕಿದರು.

## ಕಾಡಾನೆ ಗುಂಪಿಗೆ ದಾರಿ ವಾಹನ ಸವಾರರು

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕಿನ ಕಡೆಗರ್ಜೆ ಗ್ರಾಮದ ಸಮೀಪ ಹತ್ತು ಕಾಡಾನೆಗಳಿದ್ದ ಗುಂಪೊಂದು ರಸ್ತೆ ದಾಟುತ್ತಿದ್ದ ವೇಳೆ ವಾಹನ ಸವಾರರು ವಾಹನಗಳನ್ನು ನಿಲ್ಲಿಸಿ, ಕಾಡಾನೆಗಳು ಸುರಕ್ಷಿತವಾಗಿ ರಸ್ತೆ ದಾಟಲು ಅನುವು ಮಾಡಿಕೊಟ್ಟರು. ರಸ್ತೆಯಲ್ಲೇ ಕಾಡಾನೆಗಳ ಗುಂಪು ಕಾಣಿಸಿಕೊಂಡ ಹಿನ್ನಲೆ ವಾಹನ ಸವಾರರು ಕೆಲಕಾಲ ಕಾದು ನಿಂತು, ಅವುಗಳ ಚಲನವಲನವನ್ನು ಕುತೂಹಲದಿಂದ ವೀಕ್ಷಿಸಿದರು. ಕೆಲವರು ಕಾಡಾನೆಗಳ ಅಪರೂಪದ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆಹಿಡಿದರು.

ಕಾಡಾನೆಗಳು ಯಾವುದೇ ಆತಂಕಕಾರಿ ವರ್ತನೆ ತೋರದೆ ನಿಧಾನವಾಗಿ ರಸ್ತೆ ದಾಟಿ ಸಾಗಿ ದವು. ಕಾಡಾನೆಗಳ ಹಿಂಡು ರಸ್ತೆ ದಾಟುತ್ತಿರುವ ದೃಶ್ಯ ಸ್ಥಳೀಯರು ಹಾಗೂ ವಾಹನ ಸವಾರರ ಗಮನ ಸೆಳೆಯಿತು.



### ದಿವ್ಯಾ ದೇಶಮುಖ್, ತೇಜಸ್ವಿನ್ ಶಂಕರ, ಗಾಯತ್ರಿ ಗೋಪಿಚಂದ್‌ಗೆ ಪ್ರಶಸ್ತಿ

# 17 ಕ್ರೀಡಾಪಟುಗಳಿಗೆ ಅರ್ಜುನ ಪುರಸ್ಕಾರ

• ಪ್ರಜೋದಯ ವರದಿ

**ನವದೆಹಲಿ:** ಕೇಂದ್ರ ಕ್ರೀಡಾ ಸಚಿವಾಲಯವು ಅರ್ಜುನ ಪ್ರಶಸ್ತಿ ವಿಜೇತ 17 ಕ್ರೀಡಾಪಟುಗಳ ಪಟ್ಟಿಯನ್ನು ಮಂಗಳವಾರ ಬಿಡುಗಡೆ ಮಾಡಿದೆ. ಯಾವುದೇ ಕ್ರೀಡಾಪಟುವಿಗೆ ಪ್ರತಿಷ್ಠಿತ ಧ್ಯಾನ್‌ಚಂದ್ ಖೇಲ್ ರತ್ನ ಪ್ರಶಸ್ತಿ ನೀಡದಿರಲು ನಿರ್ಧರಿಸಿದೆ. ವಿಶ್ವಕಪ್ ವಿಜೇತ ಚೆಸ್ ಆಟಗಾರ್ತಿ ದಿವ್ಯಾ ದೇಶಮುಖ್, ಡೆಕಾಥ್ಲಾನ್ ಮತ್ತು ಹೈಜಂಪ್ ಪಟು ತೇಜಸ್ವಿನ್ ಶಂಕರ್ ಹಾಗೂ ಬ್ಯಾಡ್ಮಿಂಟನ್ ಆಟಗಾರ್ತಿ ಗಾಯತ್ರಿ ಗೋಪಿಚಂದ್ ಅವರು ಅರ್ಜುನ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಗ್ರಾಂಡ್ ಮಾಸ್ಟರ್ ವಿದಿತ್ ಗುಜರಾತಿ, ಗಾಯತ್ರಿ ಗೋಪಿಚಂದ್ ಅವರ ಮಹಿಳಾ ಡಬಲ್ಸ್ ಜೋಡಿ ಫ್ರಾಂಚ್ ಟ್ರೀಸಾ ಜೋಲಿ, ಗ್ಲಾಸ್ಗೊ ಕಾಮನ್‌ವೆಲ್ತ್ ಕ್ರೀಡಾಕೂಟದ ಬೆಳ್ಳಿ ಪದಕ ವಿಜೇತ ಬಾಕ್ಸರ್ ನರೇಂದರ್ ಬರ್ವಾಲ್, ವಾಕ್ ಮತ್ತು ಶ್ರವಣದೋಷ ಹೊಂದಿರುವ ರೈಫಲ್ ಶೂಟರ್ ಧನುಷ್ ಶ್ರೀಕಾಂತ್ ಕೂಡ ಗೌರವಕ್ಕೆ ಪಾತ್ರರಾಗಿದ್ದಾರೆ.

ಈ ವರ್ಷ ಆಯ್ಕೆ ಸಮಿತಿಯು ಅರ್ಜುನ ಪ್ರಶಸ್ತಿಗೆ 24 ಹೆಸರುಗಳನ್ನು ಶಿಫಾರಸು ಮಾಡಿತ್ತು. ಆದರೆ, ಕ್ರೀಡಾ ಸಚಿವಾಲಯವು 17 ಹೆಸರುಗಳನ್ನು ಮಾತ್ರ ಅನುಮೋದಿಸಿದೆ.



19 ವರ್ಷದ ದಿವ್ಯಾ ದೇಶಮುಖ್ ವಿಶ್ವಕಪ್ ಗೆದ್ದ ಮೊದಲ ಭಾರತೀಯ ಮಹಿಳೆ ಎನಿಸಿಕೊಂಡಿದ್ದಾರೆ. ವಿದಿತ್ ಗುಜರಾತಿ 2024ರ ಚೆಸ್ ಒಲಿಂಪಿಯಾಡ್‌ನಲ್ಲಿ ಚಿನ್ನದ ಪದಕ ಗೆದ್ದ ಭಾರತ ತಂಡದ ಭಾಗವಾಗಿದ್ದರು.

2023ರ ಏಷ್ಯನ್ ಗೇಮ್ಸ್‌ನ ಡೆಕಾಥ್ಲಾನ್ ಸ್ಪರ್ಧೆಯಲ್ಲಿ ಐತಿಹಾಸಿಕ ಬೆಳ್ಳಿ ಪದಕ ಹಾಗೂ ಕಳೆದ ವರ್ಷ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಎರಡನೇ ಸ್ಥಾನ ಗಳಿಸಿದ್ದ ತೇಜಸ್ವಿನ್ ಶಂಕರ್, ಈಚೆಗೆ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಕಂಚಿನ ಪದಕ ಗೆದ್ದಿದ್ದರು.

2024ರಲ್ಲಿ ದಾಖಲೆಯ 32 ಕ್ರೀಡಾಪಟುಗಳಿಗೆ ಅರ್ಜುನ ಪ್ರಶಸ್ತಿ ನೀಡಲಾಗಿತ್ತು. ಅವರಲ್ಲಿ 17 ಪ್ಯಾರಾ ಕ್ರೀಡಾಪಟುಗಳಿದ್ದರು.

**ಪ್ರಶಸ್ತಿ ವಿಜೇತರ ಪಟ್ಟಿ**

ಅರ್ಜುನ ಪ್ರಶಸ್ತಿ: ತೇಜಸ್ವಿನ್ ಶಂಕರ್ (ಅಥ್ಲೆಟಿಕ್ಸ್), ಪ್ರಿಯಾಂಕಾಗೋಸ್ವಾಮಿ (ಅಥ್ಲೆಟಿಕ್ಸ್), ನರೇಂದರ್ (ಬಾಕ್ಸಿಂಗ್), ವಿದಿತ್ ಗುಜರಾತಿ(ಚೆಸ್),ದಿವ್ಯಾ ದೇಶಮುಖ್ (ಚೆಸ್), ಧನುಷ್ ಶ್ರೀಕಾಂತ್ (ಶೂಟಿಂಗ್), ರಾಜ್‌ಕುಮಾರ್ ಪಾಲ್ (ಹಾಕಿ), ಸುರ್ಜಿತ್ (ಕಬಡ್ಡಿ), ರುದ್ರಾನ್ಶ್ ಖಂಡೇಲ್‌ವಾಲ್ (ಪ್ಯಾರಾ ಶೂಟಿಂಗ್), ಏಕ್ತಾ ಭ್ಯಾನ್ (ಪ್ಯಾರಾ ಅಥ್ಲೆಟಿಕ್ಸ್), ಅರವಿಂದ್ ಸಿಂಗ್ (ರೋಯಿಂಗ್), ಅಖಿಲ್ ಶಿಯೋರನ್ (ಶೂಟಿಂಗ್), ಟ್ರೀಸಾ ಜೋಲಿ (ಬ್ಯಾಡ್ಮಿಂಟನ್), ಗಾಯತ್ರಿ ಗೋಪಿಚಂದ್ (ಬ್ಯಾಡ್ಮಿಂಟನ್), ಲಾಲ್ರೆಮ್ಸಿ ಯಾಮಿ (ಹಾಕಿ), ಮುಹಮ್ಮದ್‌ಅಜ್ಮಲ್ (ಅಥ್ಲೆಟಿಕ್ಸ್), ಪೂಜಾ (ಕಬಡ್ಡಿ).

ಅರ್ಜುನ ಪ್ರಶಸ್ತಿ (ಜೀವಮಾನ ಸಾಧನೆ): ಶ್ರೀ ಐ.ಅರುಮೈನಾಯಗಮ್ (ಫುಟ್‌ಬಾಲ್),

ದ್ರೋಣಾಚಾರ್ಯ ಪ್ರಶಸ್ತಿ: ಪರ್ವೀರ್ ಸಿಂಗ್, ಚೋಟೆ ಲಾಲ್ ಯಾದವ್, ನೇಹಾ ಚವಾಣ್,

ದ್ರೋಣಾಚಾರ್ಯ ಪ್ರಶಸ್ತಿ (ಜೀವಮಾನ ಸಾಧನೆ): ಧರ್ಮೇಂದ್ರ ಯಾದವ್, ವೀರೇಂದರ್ ಕುಮಾರ್.

ಆದರೆ, ಈ ಬಾರಿ ಪ್ಯಾರಾ ಕ್ರೀಡಾ ಕ್ಷೇತ್ರದಿಂದ ಇಬ್ಬರಿಗೆ ಮಾತ್ರ ಪ್ರಶಸ್ತಿ ಲಭಿಸಿದೆ. 2024ರ ಪ್ಯಾರಾ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದ ಏಕ್ತಾ ಭ್ಯಾನ್ ಮತ್ತು 2024ರ ಪ್ಯಾರಾ ವಿಶ್ವಕಪ್ ಚಿನ್ನದ ಪದಕ ವಿಜೇತ ಶೂಟರ್ ರುದ್ರಾನ್ಶ್ ಖಂಡೇಲ್‌ವಾಲ್ ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಏಕ್ತಾ ಕಳೆದ ವರ್ಷ ದೆಹಲಿಯಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲೂ ಬೆಳ್ಳಿ ಪದಕ ಗೆದ್ದಿದ್ದರು.

2023ರಲ್ಲಿ ಭಾರತ ಕ್ರಿಕೆಟ್ ತಂಡದ ವೇಗಿ ಮೊಹಮ್ಮದ್ ಶಮಿ ಅರ್ಜುನ ಪ್ರಶಸ್ತಿಗೆ ಭಾಜನರಾಗಿದ್ದರು. ಆದರೆ, 2024 ಮತ್ತು 2025ನೇ ಸಾಲಿನ ಪ್ರಶಸ್ತಿ ಪಟ್ಟಿಯಲ್ಲಿ ಯಾವುದೇ ಕ್ರಿಕೆಟಿಗ ಸ್ಥಾನ ಪಡೆದಿಲ್ಲ. 1962ರ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ಫುಟ್‌ಬಾಲ್ ತಂಡದ ಆಟಗಾರರಾಗಿದ್ದ ಐ.ಅರುಮೈನಾಯಗಮ್ ಅವರು ಜೀವಮಾನ ಶ್ರೇಷ್ಠ ಸಾಧನೆಗಾಗಿ ಅರ್ಜುನ ಪ್ರಶಸ್ತಿ ಪಡೆದಿದ್ದರು.

**ಮೂವರಿಗೆ ದ್ರೋಣಾಚಾರ್ಯ ಪ್ರಶಸ್ತಿ**

ಬಾಕ್ಸಿಂಗ್ ತರಬೇತುದಾರ ಚೋಟೆ ಲಾಲ್ ಯಾದವ್, ಪರ್ವೀರ್ ಸಿಂಗ್, ನೇಹಾ ಚವಾಣ್ ಅವರಿಗೆ ದ್ರೋಣಾಚಾರ್ಯ ಪ್ರಶಸ್ತಿ ಲಭಿಸಿದೆ. ತರಬೇತಿಯಲ್ಲಿನ ಜೀವಮಾನ ಶ್ರೇಷ್ಠ ಸಾಧನೆ ಗೌರವಕ್ಕಾಗಿ ಪುರುಷರ ರಾಷ್ಟ್ರೀಯ ತಂಡದ ತರಬೇತುದಾರ ಧರ್ಮೇಂದ್ರ ಯಾದವ್ ಮತ್ತು ಕುಸ್ತಿತರಬೇತುದಾರ ವೀರೇಂದರ್‌ಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ.

**ಈ ಬಾರಿ ಯಾರಿಗೂ ಇಲ್ಲ ಖೇಲ್ ರತ್ನ**

ಆರು ತಿಂಗಳ ಹಿಂದೆ ಸುಪ್ರೀಂ ಕೋರ್ಟ್‌ನ ಮಾಜಿ ನ್ಯಾಯಮೂರ್ತಿ ಅರುಣ್ ಕುಮಾರ್ ಮಿಶ್ರಾ ನೇತೃತ್ವದ ಆಯ್ಕೆ ಸಮಿತಿಯು ಹಾಕಿ ತಾರೆ ಹಾರ್ದಿಕ್ ಸಿಂಗ್ ಅವರ ದೇಶದ ಅತ್ಯುನ್ನತ ಪ್ರಶಸ್ತಿಯಾದ ಖೇಲ್ ರತ್ನ ಗೌರವಕ್ಕೆ ಪರಿಗಣಿಸಿತ್ತಾದರೂ, ಅಂತಿಮವಾಗಿ ಅವರು ಈ ಪಟ್ಟಿಯಿಂದ ಹೊರಬಿದ್ದರು. ಖೇಲ್ ರತ್ನ ಪ್ರಶಸ್ತಿಯನ್ನು ಯಾರೊಬ್ಬರಿಗೂ ನೀಡದಿರುವುದು 2014ರ ನಂತರ ಇದೇ ಮೊದಲು.

ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಭಾರತ ಒಲಿಂಪಿಕ್ ಸಂಸ್ಥೆ ಉಪಾಧ್ಯಕ್ಷ ಗಗನ್ ನಾರಂಗ್, ಮಾಜಿ ಬ್ಯಾಡ್ಮಿಂಟನ್ ಆಟಗಾರ್ತಿ ಅಪರ್ಣಾ ಪೋಪಟ್ ಮತ್ತು ಮಾಜಿ ಅಂತಾರಾಷ್ಟ್ರೀಯ ಹಾಕಿ ಆಟಗಾರ ಎಂ.ಎಂ.ಸೋಮಯ್ಯ ಇದ್ದಾರೆ. ಖೇಲ್ ರತ್ನ ಪ್ರಶಸ್ತಿಯು 25 ಲಕ್ಷ ಮತ್ತು ಅರ್ಜುನ ಪ್ರಶಸ್ತಿಯು 15 ಲಕ್ಷ ನಗದು ಬಹುಮಾನ ಒಳಗೊಂಡಿದೆ.

ಕಳೆದ ವರ್ಷ ಖೇಲ್ ರತ್ನ ಪ್ರಶಸ್ತಿಯನ್ನು ನಾಲ್ವರು ಕ್ರೀಡಾಪಟುಗಳಿಗೆ ನೀಡಲಾಗಿತ್ತು. ವಿಶ್ವ ಚಾಂಪಿಯನ್ ಚೆಸ್ ಆಟಗಾರ ಡಿ.ಗುಕೇಶ್, ಪುರುಷರ ಹಾಕಿ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್, ಪ್ಯಾರಾ-ಅಥ್ಲೀಟ್ ಪ್ರವೀಣ್ ಕುಮಾರ್ ಮತ್ತು ಶೂಟರ್ ಮನು ಭಾಕರ್ ಅವರಿಗೆ ಗೌರವ ಲಭಿಸಿತ್ತು.

**ಬೇಕಾಗಿದ್ದಾರೆ**

ಹಾಸನ ಪ್ರತಿಷ್ಟಿತ ಮ್ಯಾನ್ ಪವರ್ ಏಜನ್ಸಿಗೆ ಕೆಳಕಂಡ ಅಭ್ಯರ್ಥಿಗಳು ಬೇಕಾಗಿದ್ದಾರೆ.

• ಫೀಲ್ಡ್ ಆಫೀಸರ್ : ಸೆಕ್ಯೂರಿಟಿ ಏಜನ್ಸಿಯಲ್ಲಿ ಕನಿಷ್ಠ 1 ವರ್ಷದ ಅನುಭವ. ವಿದ್ಯಾರ್ಹತೆ - ಪಿ.ಯು.ಸಿ

• ರಿಸೆಪ್ಶನಿಸ್ಟ್ : ಯಾವುದೇ ಕಂಪನಿಯಲ್ಲಿ ಕನಿಷ್ಠ 1 ವರ್ಷದ ಅನುಭವ. ವಿದ್ಯಾರ್ಹತೆ - ಪಿ.ಯು.ಸಿ / ಪದವಿ

• ಡಾಟಾ ಎಂಟ್ರಿ ಆಪರೇಟರ್ : ಯಾವುದೇ ಕಂಪನಿಯಲ್ಲಿ ಕನಿಷ್ಠ 1 ವರ್ಷದ ಅನುಭವ ಮತ್ತು ಎಕ್ಸೆಲ್‌ನಲ್ಲಿ ನೈಪುಣ್ಯತೆ ಅಗತ್ಯ. ವಿದ್ಯಾರ್ಹತೆ - ಪದವಿ

ಆಸಕ್ತರು ಸಂಪರ್ಕಿಸಿ : 8884800050

WE ARE HIRING

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK